# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038






ಸಂಪುಟ:02 Volume:02 • ಸಂಚಿಕೆ: 89 Issue: 89 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 02.10.2024 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2








## ಮೈಕ್ರೋ ನ್ಯೂಸ್

### ಅ. 4ಕ್ಕೆ ಮಹರ್ಷಿ ವಾಲ್ಮೀಕಿ ಜಯಂತಿ: ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಮಟ್ಟದ ಮತ್ತು ಹೊಸಪೇಟೆ ತಾಲೂಕು ಮಟ್ಟದ ಮಹರ್ಷಿ ವಾಲ್ಮೀಕಿ ಜಯಂತಿಯ ಆಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯು ಅಕ್ಟೋಬರ್ 4ರಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆಯಲಿದೆ.

ವಿಜಯನಗರ ಜಿಲ್ಲೆಯ ಸಂಘ-ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಮುಖಂಡರು, ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಪೂರ್ವಭಾವಿ ಸಭೆಗೆ ಹಾಜರಾಗಿ ಕಾರ್ಯಕ್ರಮವನ್ನು ಯಶಸ್ಸುಗೊಳಿಸಬೇಕು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

### ಕುಂದುಕೊರತೆ ನಿವಾರಣಾ ಸಮಿತಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳ ನೇಮಕ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕುರುಗೋಡು ಪುರಸಭೆ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ನಿಯಂತ್ರಣ) ಅಧಿನಿಯಮ 2014 ರಲ್ಲಿನ 20ನೇ ಪ್ರಕರಣದ 1ನೇ ಉಪ ಪ್ರಕರಣದ ಅಡಿಯಲ್ಲಿ ಹಾಗೂ ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ನಿಯಂತ್ರಣ) ಅಧಿನಿಯಮ 2019 ರ ಅಧ್ಯಾಯ 3ರ ಕಲಂ ಸಂಖ್ಯೆ 18ರನ್ವಯ ರಚಿಸಲಾದ ಕುಂದು ಕೊರತೆ ನಿವಾರಣಾ ಸಮಿತಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಅರೆಕಾಲಿಕ ಆಧಾರದಲ್ಲಿ ನೇಮಕ ಮಾಡಿಕೊಳ್ಳಬೇಕಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳವರು ಅ.15 ರೊಳಗಾಗಿ ಅರ್ಜಿ ಸಲ್ಲಿಸಬಹುದು.

ಅಧ್ಯಕ್ಷರ ಹುದ್ದೆಗೆ ಮತ್ತು ಸದಸ್ಯರ ಸ್ಥಾನಕ್ಕೆ ಅರ್ಹತೆ ಸಂಭಾವನೆ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕುರುಗೋಡು ಪುರಸಭೆಯ ವೆಬ್‌ಸೈಟ್ www.kurugodutown.mrc.gov.in ಮತ್ತು ಡೇ-ನಲ್ಮ್ ಶಾಖೆಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಕುರುಗೋಡು ಪುರಸಭೆಯ ಮುಖ್ಯಾಧಿಕಾರಿಯವರು ತಿಳಿಸಿದ್ದಾರೆ.




# ಸಂಸ್ಕಾರ ಕಲಿಸಿದ್ರೆ ವೃದ್ಧಾಶ್ರಮ ಇರದು

## ಡಿಸಿ ಎಂ.ಎಸ್.ದಿವಾಕರ ಹೇಳಿಕೆ | ಪೋಷಕರು ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೇ ಆಸ್ತಿಯನ್ನಾಗಿಸಿ ಹಿರಿಯರಿಗೆ ಅಗೌರವ ತೋರುವುದು ಕಂಡುಬರುತ್ತಿದೆ | ಗೌರವಿಸದ ಮನೆಗಳಲ್ಲಿ ಎಂದಿಗೂ ನೆಮ್ಮದಿ ಇರದು





**ಹಂಪಿ ಟೈಮ್ಸ್ ಹೊಸಪೇಟೆ**

ತಂದೆ, ತಾಯಿ ಮತ್ತು ಪೋಷಕರು ತಮ್ಮ ಮಕ್ಕಳಿಗೆ ಸಂಸ್ಕಾರ ಕಲಿಸಿದರೆ ಅವರು ತಂದೆ, ತಾಯಿಯರನ್ನು ಕಳೆದುಕೊಳ್ಳಲು ಇಚ್ಛಿಸುವುದಿಲ್ಲ. ಆಗ ಯಾವುದೇ ವೃದ್ಧಾಶ್ರಮದ ಅವಶ್ಯಕತೆ ಇರುವುದಿಲ್ಲ ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿಶೇಷಚೇತನರಿಗೆ ಮತ್ತು ಹಿರಿಯ ನಾಗರಿಕರಿಗಾಗಿ ಶ್ರಮಿಸುತ್ತಿರುವ ವಿವಿಧ ಸಂಘ ಸಂಸ್ಥೆಗಳು ಇವರು ಸಂಯುಕ್ತಾಶ್ರಯದಲ್ಲಿ ಮಂಗಳವಾರ ನಗರದ ಚರ್ಚ್ ಭವನದಲ್ಲಿ ನಡೆದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಹಿರಿಯರಿಗೆ ಮನೆಗಳಲ್ಲಿ ಅಗೌರವ ತೋರುವುದು ಕಂಡುಬರುತ್ತಿದೆ. ಹಿರಿಯರು ತಮ್ಮದೇ ಆದ ರೀತಿಯಲ್ಲಿ ಸಾಧನೆ ಮಾಡಿರುತ್ತಾರೆ. ಅವರಿಗೆ ಗೌರಸಲ್ಲಿಸಬೇಕು ಎನ್ನುವ ಸಂದೇಶ ರವಾನಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ ವಾಗಿದೆ. ಸಮಾಜದಲ್ಲಿ ಯಾವ ಕುಟುಂಬಗಳಲ್ಲಿ ಹಿರಿಯ ನಾಗರಿಕರಿಗೆ ಗೌರವ ನೀಡುವುದಿಲ್ಲಯೋ ಅಂತಹ ಕುಟುಂಬಗಳು ಸಂತೋಷ, ನೆಮ್ಮದಿಯಿಂದಿರಲು ಸಾಧ್ಯವಿಲ್ಲ ಎಂದರು.

ಪೋಷಕರಿಗೆ ಮಕ್ಕಳ ಮೇಲೆ ಅತಿಯಾದ ಪ್ರೀತಿ, ವ್ಯಾಮೋಹ ಇರಬಾರದು. ಅತಿಯಾದ ಪ್ರೀತಿ, ವ್ಯಾಮೋಹವೇ ಮುಂದೆ ಮಕ್ಕಳಿಗೆ ಕೆಲವೊಮ್ಮೆ ಕಲ್ಲುಮುಳ್ಳಿನ ಹಾದಿಯಾಗುತ್ತದೆ ಎಂದು ಎಚ್ಚರಿಸಿದರು. ಹಿರಿಯರು ಅಗಾದವಾದ ಅನುಭವವನ್ನು ಹೊಂದಿರುತ್ತಾರೆ. ಈಗಿನ ಯುವಕರಲ್ಲಿಯೂ ನಿಮ್ಮ ಅನುಭವನ್ನು ಹಂಚಿಕೊಂಡು ಅವರನ್ನು ಸಮಾಜದ ಉತ್ತಮ ನಾಗರಿಕರನ್ನಾಗಿ ಮಾಡಬೇಕು ಎಂದು ಹಿರಿಯ ನಾಗರಿಕರಿಗೆ ಸಲಹೆ ನೀಡಿದರು.

> **ಪೋಷಕರು ಮಕ್ಕಳಿಗಾಗಿ ಆಸ್ತಿ ಮಾಡುವುದನ್ನು ನಿಲ್ಲಿಸಿ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿದರೆ ಅವರು ಮುಂದೆ ಪೋಷಕರನ್ನು ಮಕ್ಕಳ ರೀತಿ ನೋಡಿಕೊಳ್ಳುತ್ತಾರೆ. ಹಿರಿಯ ನಾಗರಿಕರು ಜೀವನದಲ್ಲಿ ಎಲ್ಲವನ್ನು ತಿಳಿದ ಮುಗ್ಧರಂತೆ ಇರುತ್ತಾರೆ. ಅವರನ್ನು ಅಷ್ಟೇ ಮುಗ್ಧತೆಯಿಂದ ನೋಡಿಕೊಳ್ಳುವುದು ಮಕ್ಕಳ ಜವಾಬ್ದಾರಿ.**
>
> **– ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ, ವಿಜಯನಗರ**

ಈ ಸಂದರ್ಭದಲ್ಲಿ ವಿಜಯನಗರ ಜಿಲ್ಲೆಯ ರಂಗಭೂಮಿ, ಸಮಾಜಸೇವೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಗರಿಬೊಮ್ಮನಹಳ್ಳಿ ತಾಲೂಕಿನ ಕೆ. ಲಕ್ಷ್ಮೀಪತಿ, ಕೊಟ್ಟೂರು ತಾಲೂಕಿನ ಎಂ.ಶೇಖರಪ್ಪ, ಹೊಸಪೇಟೆ ತಾಲೂಕಿನ ಹನುಮಂತಪ್ಪ ನಾಯಕರ, ಹರಪನಹಳ್ಳಿ ತಾಲೂಕಿನ ಷಡಕ್ಷರಪ್ಪ, ಕೂಡ್ಲಿಗಿ ತಾಲೂಕಿನ ವೆಂಕಟೇಶ.ಕೆ ಹೂವಿಹಡಗಲಿ ತಾಲೂಕಿನ ಶಂಕ್ರಯ್ಯ ತೋಟದೇವರ ಮಠ ಮತ್ತು ಹಗರಿಬೊಮ್ಮನಹಳ್ಳಿ ತಾಲೂಕಿನ ಚುಕ್ಕನಹಲ್ಲು ರಾಮಣ್ಣ ಇವರನ್ನು ಸನ್ಮಾನಿಸಲಾಯಿತು. ಈ ಹಿಂದೆ ಆಯೋಜಿಸಿದ್ದ, ಬಿರುಸಿನ ನಡಿಗೆ ಸ್ಪರ್ಧೆ, ಮ್ಯೂಸಿಕಲ್ ಚೇರ್ ಸ್ಪರ್ಧೆ, ಗಾಯನ ಸ್ಪರ್ಧೆ ಮತ್ತು ಏಕ ಪಾತ್ರಾಭಿನಯ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿಪತ್ರ ವಿತರಿಸಲಾಯಿತು.

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎನ್.ಎಫ್ ಇಮಾಮ್ ನಿಯಾಜಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಶ್ವೇತಾ ಎಸ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಂದೀಪ ಕುಮಾರ ಉಂಕಿ, ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಅವಿನಾಶಲಿಂಗ ಎಸ್ ಗೋಟಖಿಂಡಿ, ಜಿಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂಧು ಯಲಿಗಾರ ಮತ್ತು ಬ್ರಹ್ಮಕುಮಾರಿ ಮಾನಸಾ ಉಪಸ್ಥಿತರಿದ್ದರು.

# ವಾರ್ತಾ ಇಲಾಖೆಯ ಬಾಪೂಜಿ ಪ್ರಬಂಧ ಸ್ಪರ್ಧೆ: ಫಲಿತಾಂಶ ಪ್ರಕಟ

**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ವಿಜಯನಗರ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆಯ ಫಲಿತಾಂಶವನ್ನು ಪ್ರಕಟಿಸಲಾಗಿದೆ ಎಂದು ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಅವರು ತಿಳಿಸಿದ್ದಾರೆ.

ಮಹಾತ್ಮ ಗಾಂಧೀಜಿಯರ ಬದುಕು, ಸ್ವಾತಂತ್ರ್ಯ ಚಳುವಳಿ, ಅಹಿಂಸಾ ಮಾರ್ಗ, ಅಸ್ಪೃಶ್ಯತೆ ನಿವಾರಣೆಗಾಗಿ ನಡೆಸಿದ ಪ್ರಯೋಗಗಳ ಇತ್ಯಾದಿ ವಿಚಾರಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಪ್ರೌಢಶಾಲೆ, ಪಿಯುಸಿ ಮತ್ತು ಪದವಿ ಸ್ನಾತಕೋತ್ತರ-ಪದವಿ ವಿಭಾಗದಲ್ಲಿ ವಿಜಯನಗರ ಜಿಲ್ಲೆಯಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಆಯೋಜಿಸಲಾಗಿತ್ತು.

ಬಾಪೂಜಿ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಅಕ್ಟೋಬರ್ 10ರಂದು ನಡೆಯುವ ಮಹಾತ್ಮ ಗಾಂಧೀಜಿ ಜಯಂತಿಯ ವಿಶೇಷ ಕಾರ್ಯಕ್ರಮದಲ್ಲಿ ಪ್ರತಿ ವಿಭಾಗದಲ್ಲಿ ತಲಾ ಮೂರು ಬಹುಮಾನ ನೀಡಲಾಗುವುದು. ಪ್ರಥಮ 3000 ರೂ., ದ್ವಿತೀಯ 2000 ರೂ ಮತ್ತು ತೃತೀಯ 1000 ರೂ.ನಗದು ಬಹುಮಾನ ನೀಡಲಾಗುವುದು.

**ಪ್ರೌಢಶಾಲೆ ವಿಭಾಗ:**
ಪ್ರೌಢಶಾಲೆ ವಿಭಾಗದಲ್ಲಿ ಕೊಟ್ಟೂರು ತಾಲ್ಲೂಕಿನ ಕಂದಗಲ್‌ನ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಪಿ.ಭರತ್ ಕುಮಾರ್ ಪ್ರಥಮ ಸ್ಥಾನ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವಟ್ಟಮ್ಮನಹಳ್ಳಿ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ವೀಣಾ.ಹೆಚ್ ದ್ವಿತೀಯ ಸ್ಥಾನ, ಹರಪ್ಪನಹಳ್ಳಿ ತಾಲ್ಲೂಕಿನ ಹಗರಿಗಜಾಪುರ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಕೆ.ಉಷಾ ತೃತೀಯ ಸ್ಥಾನ ಪಡೆದಿದ್ದಾರೆ.

**ಪದವಿಪೂರ್ವ ಶಿಕ್ಷಣ ವಿಭಾಗ:**
ಪದವಿ ಪೂರ್ವ ಶಿಕ್ಷಣ ವಿಭಾಗದಲ್ಲಿ ಕೊಟ್ಟೂರಿನ ಎಸ್.ಜಿ.ಎಸ್ ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಭವಾನಿ.ಎಂ ಪ್ರಥಮ ಸ್ಥಾನ, ಹೂವಿನಹಡಗಲಿ ತಾಲ್ಲೂಕಿನ ಹಿರೇಹಡಗಲಿಯ ವಿ.ಕೆ.ಕೆ.ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ರಿಯಾನಾ ಪಿಂಜಾರ ದ್ವಿತೀಯ ಸ್ಥಾನ, ಮರಿಯಮ್ಮನಹಳ್ಳಿಯ ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅಕ್ಷತಾ ತೃತೀಯ ಸ್ಥಾನ ಪಡೆದಿದ್ದಾರೆ.

**ಪ್ರೌಢಶಾಲೆ ವಿಭಾಗ ವಿಜೇತರು**



**ಪದವಿಪೂರ್ವ ಶಿಕ್ಷಣ ವಿಭಾಗ ವಿಜೇತರು**



**ಪದವಿ-ಸ್ನಾತಕೋತ್ತರ ಪದವಿ ವಿಭಾಗ ವಿಜೇತರು**



**ಪದವಿ-ಸ್ನಾತಕೋತ್ತರ ಪದವಿ ವಿಭಾಗ:**
ಪದವಿ-ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರವೀಣ್ ನಿಂಗಪ್ಪ ಕಿತ್ತೂರು ಪ್ರಥಮ ಸ್ಥಾನ, ಹೊಸಪೇಟೆಯ ಶಂಕರ್ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಿ.ಎಸ್ಸಿ ವಿದ್ಯಾರ್ಥಿನಿ ಬಿ.ಕಲ್ಪನಾ ದ್ವಿತೀಯ ಸ್ಥಾನ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾ ಅಧ್ಯಯನ ವಿಭಾಗದ ಶೀತಲ್ ಬೇಕ್ವಾಡಕರ್ ತೃತೀಯ ಸ್ಥಾನ ಪಡೆದಿದ್ದಾರೆ.

# ಮಕ್ಕಳ ಕೈಗೆ ಬಣ್ಣ ಬಣ್ಣದ ಬಿಲ್ಲು ಬಾಣಗಳು ಸಿದ್ಧ

## ಹಿಂದೂ ಧಾರ್ಮಿಕ ಪರಂಪರೆ ಉಳಿವಿಗಾಗಿ ಪರಿಶ್ರಮ

**ಬಂದಾತರ ಪ್ರಕಾಶ್**
**ಹಂಪಿ ಟೈಮ್ಸ್ ಕೊಟ್ಟೂರು**



ನಾಡ ಹಬ್ಬ ವಿಜಯ ದಶಮಿ ಪ್ರಯುಕ್ತ ವಿಜಯದ ಸಂಕೇತವಾಗಿ ಹಾಗೂ ಹಿಂದೂ ಧಾರ್ಮಿಕ ಪರಂಪರೆ ಪೋಷಣೆಗಾಗಿ ಮಾರ್ನವಮಿಗೆ ಸಿದ್ದಗೊಂಡಿವೆ ವಿವಿಧ ಗಾತ್ರದ ಬಣ್ಣ, ಬಣ್ಣದ ಚಿತ್ತಾರದ ಬಿಲ್ಲು ಬಾಣಗಳು.

ಪಟ್ಟಣದ ಬಡಿಗೇರ ವೀರಶ್ ಮತ್ತು ಅವರ ಪುತ್ರ ನವೀನ್ ಆಚಾರಿ ಹಾಗೂ ಕುಟುಂಬದ ಸದಸ್ಯರ ಕೈ ಚಳಕದಿಂದ ಮಿಂಚಿನ ಬಣ್ಣದ ಹಾಳೆಗಳಿಂದ ಹಾಗೂ ತಗಡಿನ ಪಟ್ಟಿ, ಬಿದಿರು, ಅಂಟು ಬಳಸಿ ಸುಮಾರು 3 ಸಾವಿರಕ್ಕೂ ಹೆಚ್ಚು ಆಕರ್ಷಕ ಬಿಲ್ಲು ಬಾಣಗಳು ಮಕ್ಕಳ ಆಟಕ್ಕೆ ತಯಾರಗಿವೆ.

ಪಾಂಡವರು ಅಜ್ಞಾತ ವಾಸ ಪೂರೈಸಿ ಪುರ ಪ್ರವೇಶದ ಸಂದರ್ಭ ವಿಜಯದ ಸಂಕೇತವಾಗಿ ಹಾಗೂ ಭಾಗವಾನ ರಾಮನು ರಾವಣನನ್ನು ಬಿಲ್ಲಿನಿಂದ ಕೊಂದು ಸೀತೆಯನ್ನು ರಕ್ಷಿಸಿದನು ಎಂಬ ಕಥೆಯ ಹಿನ್ನೆಲೆ ಹಿಂದೂ ಧಾರ್ಮಿಕ ಪರಂಪರೆ ಉಳಿವಿಗಾಗಿ ಈ ಬಿಲ್ಲು ಬಾಣಗಳನ್ನು ತಯಾರಿಸುವಂತದ್ದು ನಡೆದಿದೆ ಎಂಬುದು ಹಿರಿಯರ ಅಭಿಪ್ರಾಯ.

ವಿಜಯ ದಶಮಿ ಪೂರ್ವದಲ್ಲಿ ಅಮವಾಸ್ಯೆ ದಿನದಂದು ಗಂಡು ಮಕ್ಕಳು ಇರುವ ಪೋಷಕರು ತಮ್ಮ ಮಕ್ಕಳ ವಸ್ಸಿಗನುಗುಣವಾಗಿ ಮಾರುಕಟ್ಟೆಯಲ್ಲಿ ಸಿಗುವ ವಿವಿಧ ಗಾತ್ರದ ಬಿಲ್ಲುಗಳನ್ನು ಖರೀದಿಸಿ ಪಟ್ಟಣದ ಆರಾಧ್ಯದೇವರ ಆಶೀರ್ವಾದ ಸಲ್ಲಿಸಿ ಮಕ್ಕಳಿಗೆ ಆಟ ಹಾಡಲು ಕೊಡುವರು.

ಪಟ್ಟಣದಲ್ಲಿ ಮಕ್ಕಳು ಬಿಲ್ಲು ಬಾಣಗಳನ್ನು ಕೈಯಲ್ಲಿಡಿದು ನಾಳೆ ಓಡಾಡುವ ದೃಶ್ಯ ನೋಡುವುದೇ ಚಂದ, ಜತೆಗೆ ಬಾಣ ಹಿಡಿದು ಆಟ ಹಾಡುತ್ತಿದ್ದರೆ ಎಂತವರನ್ನು ತನ್ನತ್ತ ಆಕರ್ಷಿಸುತ್ತದೆ, ಹಾಗೆ ತಮಗರಿವಿಲ್ಲದಂತೆ ದೈವತ್ವದ ಭಾವನೆ ನೋಡುಗರಲ್ಲಿ ಮೂಡುತ್ತದೆ.

> ಪಟ್ಟಣದಲ್ಲಿ ನಮ್ಮ ಕುಟುಂಬ ಪ್ರತಿವರ್ಷ ಈ ವೃತ್ತಿಯನ್ನು ಮಾಡುತ್ತ ಬಂದಿದ್ದೇವೆ, ಸಣ್ಣ ಬಿಲ್ಲು ಬಾಣಕ್ಕೆ 10, 15 ರೂ. ದೊಡ್ಡದಕ್ಕೆ 20, 25 ರೂ.ರಿಟೇಲ್ ಧರದಲ್ಲಿ ಮಾರಟ ಮಾಡುವೆವು, ಖರ್ಚು ವೆಚ್ಚ ಕಳೆದರೆ ಇದರಲ್ಲಿ ಅಷ್ಟೊಂದು ಲಾಭ ಸಿಗದು, ಆದರೂ ಹಿಂದೂ ಸಂಸ್ಕೃತಿ, ಪದ್ದತಿ ಉಳಿವಿಗಾಗಿ ಈ ವೃತ್ತಿ ಇಂದಿಗೂ ಮುಂದುವರೆಸಿದ್ದೇವೆ.
>
> **ಬಡಿಗೇರ ವೀರೇಶ್** ಬಿಲ್ಲು ಬಾಣ ತಯಾರಿಕರು, ಕೊಟ್ಟೂರು

# ಆತ್ಮಸಾಕ್ಷಿಯಾಗಿ ಕೆಲಸ ಮಾಡ್ತೀನಿ. ರಾಜೀನಾಮೆ ನೀಡಲ್ಲ: ಸಿಎಂ ಸಿದ್ದರಾಮಯ್ಯ



■ **ಹಂಪಿ ಟೈಮ್ಸ್ ಬೆಂಗಳೂರು**


ನಾನು ಅತ್ಮಸಾಕ್ಷಿಯಾಗಿ ಕೆಲಸ ಮಾಡುತ್ತೇನೆ ರಾಜಿನಾಮೆ ನೀಡುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದರು.

ಮುಖ್ಯಮಂತ್ರಿಯವರು ಮಂಗಳವಾರ ರವೀಂದ್ರ ಕಲಾ ಕ್ಷೇತ್ರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ನನ್ನ ಪತ್ನಿ ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಂಡಿದ್ದಾರೆ. ಪತ್ರ ಬರೆದಿರುವ ಕುರಿತು ನನಗೆ ಯಾವುದೇ ಮಾಹಿತಿಯಿಲ್ಲ. ಅವರ ಸಹೋದರ ಮಲ್ಲಿಕಾರ್ಜುನ ಸ್ವಾಮಿಯವರು ಜಮೀನಿನ ಮಾಲೀಕರಾಗಿದ್ದರು. ಉಡುಗೊರೆ ರೂಪದಲ್ಲಿ ನನ್ನ ಪತ್ನಿಗೆ 3 ಎಕರೆ 16 ಗುಂಟೆ ಜಮೀನು ನೀಡಿದ್ದರು. ಅದನ್ನು ಮುಡಾದವರು ಒತ್ತುವರಿ ಮಾಡಿಕೊಂಡು ನಿವೇಶನಗಳನ್ನು ರಚಿಸಿ ಮಾರಿಕೊಂಡಿದ್ದರು. ಅದಕ್ಕೆ ಬದಲಿ ನಿವೇಶನ ಕೋರಿದ್ದು, ವಿಜಯನಗರದ 3 ಮತ್ತು 4 ನೇ ಹಂತದಲ್ಲಿ ನಿವೇಶನ ಮಂಜೂರು ಮಾಡಿತ್ತು. ನನ್ನ ಪತ್ನಿಯವರು ವಿಜಯನಗರದಲ್ಲೇ ನೀಡುವಂತೆ ಕೇಳಿರಲಿಲ್ಲ. ಈಗ ಅದು ದೊಡ್ಡ ವಿವಾದವಾಗಿದೆ. ಇದರಿಂದ ನನ್ನ ಪತಿಯ ತೇಜೋವಧೆಯಾಗುತ್ತಿರುವುದು ಹಾಗೂ ರಾಜಕೀಯ ದ್ವೇಷ ಹಾಗೂ ಸೇಡನ್ನು ತೀರಿಸಿಕೊಳ್ಳತ್ತಿರುವ ಕೆಲಸವನ್ನು ವಿರೋಧಿಗಳು ಮತ್ತು ವಿರೋಧ ಪಕ್ಷಗಳು ಮಾಡುತ್ತಿರುವುದರಿಂದ ಮನನೊಂದು ನಿವೇಶನಗಳನ್ನು ಮರಳಿ ನೀಡಲು ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ನಿನ್ನೆ ಇಡಿಯವರು ಇಸಿಐಆರ್ ಫೈಲ್ ಮಾಡಿದ್ದಾರೆ ಎಂಬ ಮಾಧ್ಯಮದವರ ಪ್ರಶ್ನೆಗೆ ಮುಖ್ಯಮಂತ್ರಿಯವರು ಕಾನೂನು ರೀತಿ ಯಾವೆಲ್ಲಾ ಕ್ರಮವಿದೆ ತೆಗೆದುಕೊಳ್ಳಲಿ ಎಂದರು.

ಜಮೀನಿನ ಬದಲಿಗೆ ನಿವೇಶನಗಳನ್ನು ಹಂಚಿಕೆ ಮಾಡಿರುವುದು ನನ್ನ ಪ್ರಕಾರ Money Laundering ಆಗುವುದಿಲ್ಲ ಈ ಪ್ರಕರಣದಲ್ಲಿ ನನ್ನ ಪಾತ್ರವೇನು? ವಿರೋಧ ಪಕ್ಷದವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು ರಾಜಿನಾಮೆ ನೀಡುವುದರಿಂದ ಎಲ್ಲವೂ ಮುಗಿಯುತ್ತದೆಯೇ? ಅನಗತ್ಯವಾಗಿ ರಾಜಿನಾಮೆ ಕೇಳುತ್ತಿದ್ದಾರೆ ನನ್ನ ತಪ್ಪಿಲ್ಲ ಎಂದ ಮೇಲೆ ರಾಜಿನಾಮೆ ಯಾಕೆ ನೀಡಬೇಕು ಎಂದು ಮಾಧ್ಯಮದವರಿಗೆ ಉತ್ತರಿಸಿದರು. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ನವರ ಪ್ರಕರಣಕ್ಕೂ ಹಾಗೂ ನನ್ನ ಪ್ರಕರಣಕ್ಕೂ ವ್ಯತ್ಯಾಸವಿದೆ. ಇದರಲ್ಲಿ ನನ್ನ ಪಾತ್ರವಿಲ್ಲ ಯಡಿಯೂರಪ್ಪ ಡಿನೊಟಿಫೈ ಮಾಡಿದ್ದರು ನಾನು ಡಿನೋಟಿಫೈ ಮಾಡಿಲ್ಲ; ಒಂಟಿಜಥಿ ಐಚಿಣಟಿಜಜಡಿುಟಿಂ ಮಾಡಿಲ್ಲ ನಾನು ಅತ್ಮಸಾಕ್ಷಿಯಾಗಿ ಕೆಲಸ ಮಾಡುತ್ತೇನೆ ರಾಜಿನಾಮೆ ನೀಡುವ ಅಗತ್ಯವಿಲ್ಲ ಎಂದು ಹೇಳಿದರು.

# ಯುಗಪುರುಷ....ಮಹಾತ್ಮಾ ಗಾಂಧಿ



ಒಬ್ಬ ವ್ಯಕ್ತಿ ಒಂದಿಡೀ ಸಮುದಾಯದ ಶಕ್ತಿಯಾದ. ಇಡೀ ದೇಶದ ಒಕ್ಕೊರಲಿನ ದನಿಗೆ ಕಹಳೆಯಾದ. ಆತನ ಅತಿ ಸಾಧಾರಣ ವಸ್ತ್ರವೊಂದರಲ್ಲೇ ಆತ ಅಸಾಧಾರಣ ಶಕ್ತಿಯಾದ..ನಿರಾಯುಧನಾಗಿದ್ದ ಈತನಿಗೆ ಸರ್ವಾಯುಧಧಾರಿಗಳು ಶರಣಾದರು. ತೆಳುಕಾಯದ ಈತನ ದನಿಗೆ ಇಡೀ ಬ್ರಿಟಿಷ್ ಸಾಮ್ರಾಜ್ಯ ನಡುಗುತ್ತಿತ್ತು .

ಯಾವುದೀ ಶಕ್ತಿ? ಯಾರು ಈ ವ್ಯಕ್ತಿ? ಖಡ್ಗದ ಝೇಂಕಾರವಿಲ್ಲದ, ಗುಂಡಿನ ಮೊರೆತವಿಲ್ಲದೆ, ಕೇವಲ ಅಹಿಂಸೆಯ ಬಲದಿಂದಲೇ ಸ್ವಾತಂತ್ರ್ಯ ಪಡೆದ ಭಾರತ ದೇಶದ ಹೆಮ್ಮೆಯ ಕುವರ ದಣಿವರಿಯದ ಸಂತ ....ಅವರೇ ನಮ್ಮ ನಿಮ್ಮೆಲ್ಲರ ಪ್ರೀತಿಯ ಬಾಪು, ಮಹಾತ್ಮ ಗಾಂಧಿ .

ಕೇವಲ ನಾಮಮಾತ್ರದಿಂದಲೇ ಇಡೀ ದೇಶದಲ್ಲಿ, ದೇಶದ ಜನತೆಯಲ್ಲಿ ರೋಮಾಂಚನ ಹುಟ್ಟಿಸುತ್ತಿದ್ದ ವ್ಯಕ್ತಿ ಗಾಂಧಿ. ಆತನಲ್ಲಿದ್ದ ಶಕ್ತಿ ಯಾವುದು?...ಅಹುದು , ಅದುವೇ ಆತನಲ್ಲಿದ್ದ ಅಂತಸ್ಸತ್ವ, ಸತ್ಯಸಂಧತೆ, ಅಹಿಂಸಾವಾದ ಮತ್ತು ಅಂತಿಮವಾಗಿ ಮಾನಸಿಕ ದೃಢತೆ.

ತುಂಡು ಬಟ್ಟೆಯುಟ್ಟು ಒಂದಿಡೀ ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ನಡುಗಿಸಿದ ಗಾಂಧೀಜಿಯವರಿಗಿದ್ದ ಅಂತಶಕ್ತಿಯ ಮೂಲಸೆಲೆ ಯಾವುದು? ಅಹಿಂಸೆಯ ಮೂಲಕವೇ ದೇಶದ ಜನರನ್ನೆಲ್ಲ ಒಗ್ಗೂಡಿಸಿ ಶಾಂತಿಯ ಕಹಳೆ ಊದಿದ ಗಾಂಧಿ ದೇಶದ ರಾಷ್ಟ್ರಪಿತ ಎನಿಸಿದ್ದು ಯಾವಾಗ ?ಅವರ ಯಾವ ಗುಣಗಳು ಅವರನ್ನು ಮಹಾತ್ಮ ಎನಿಸಿದವು? ಇವೆಲ್ಲ ನಮ್ಮ ಪ್ರಶ್ನೆಗಳು ಅವುಗಳಿಗೆ ಉತ್ತರ ಹುಡುಕುವ ಪ್ರಯತ್ನವೇ ನನ್ನದು ಮತ್ತು ಆ ನಿಟ್ಟಿನಲ್ಲಿ ನಾನು ಗಾಂಧಿಯವರನ್ನು ಅನುಸರಿಸಲು ಪ್ರಯತ್ನಿಸುವೆ ಎಂದು ನಮ್ರವಾಗಿ ಹೇಳಬಯಸುತ್ತೇನೆ .



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಗಾಂಧೀಜಿಯವರ ಜೀವನವೇ ಒಂದು ಗಾಥೆ. ಅವರು ತಮ್ಮನ್ನು ತಾವೇ ಪರೀಕ್ಷೆಗಳಿಗೆ ಒಡ್ಡಿಕೊಂಡರು. ಅತ್ಯಂತ ಕಠಿಣ ಶಿಕ್ಷೆಗಳನ್ನು ವಿಧಿಸಿಕೊಂಡರು.ಅವರು ತಪ್ಪು ಮಾಡಿಲ್ಲವೆಂದಲ್ಲ , ಆದರೆ ತಾವು ಮಾಡಿದ ತಪ್ಪನ್ನು ವಿಚಕ್ಷಣ ದೃಷ್ಟಿಯಿಂದ ಪರಿಕಿಸಿ ನೋಡಿದರು.
ಹೇಗೆ ಅಕ್ಕಸಾಲಿಗ ಆಭರಣವನ್ನು ತಯಾರಿಸುವಾಗ ಚಿನ್ನವನ್ನು ಕೆಂಪಾಗಿ ಕಾಯಿಸಿ ಬಡಿದು ಕತ್ತರಿಸಿ ಸುಂದರವಾದ ಆಭರಣಗಳನ್ನು ತಯಾರಿ ಸುವನೋ, ಹಾಗೆಯೇ ಗಾಂಧಿಯವರು ತಮ್ಮನ್ನು ತಾವು ಹಲ ಕೆಲ ಪರೀಕ್ಷೆಗಳ ಮೂಲಕ ಕೆತ್ತಿ ತಿದ್ದಿ ತೀಡಿ ತಮ್ಮ ವ್ಯಕ್ತಿತ್ವವನ್ನು ಅಪರಂಜಿಯನ್ನಾಗಿಸಿಕೊಂಡರು.
**ಸತ್ಯ–** ಸತ್ಯಕ್ಕೆ ಅನ್ವರ್ಥನಾಮನಾದ ರಾಜ ಹರಿಶ್ಚಂದ್ರ ಮಹಾರಾಜ ಗಾಂಧಿಯವರ ಆದರ್ಶವಾಗಿದ್ದ. ಸತ್ಯಕ್ಕೆ ಎಂದೂ ಸಾವಿಲ್ಲ. ಸತ್ಯ ಎನ್ನುವುದು ನೀರಿನಲ್ಲಿರುವ ಎಣ್ಣೆಯಂತೆ ಅದು ಯಾವಾಗಲೂ ತೇಲುತ್ತಿರುತ್ತದೆ. ನೀವು ಅದೆಷ್ಟೇ ಸುಳ್ಳಿನ ನೀರನ್ನು ಸೇರಿಸಿದರೂ ,ಸತ್ಯ ಎನ್ನುವ ಎಣ್ಣೆ ಎಂದೂ ತಳ ಕಾಣುವುದಿಲ್ಲ.ಈ ಸತ್ಯದ ತತ್ತ್ವವೇ ಗಾಂಧಿಯವರಿಗೆ ಮಾನಸಿಕ ದೃಢತೆಯನ್ನು ನೀಡಿತ್ತು .
**ಅಹಿಂಸೆ–** ಹಿಂಸೆಯಿಂದ ಏನೂ ಸಾಧಿಸಲಾಗುವುದಿಲ್ಲ ಖಡ್ಗಕ್ಕೆ ಖಡ್ಗ ಉತ್ತರವಲ್ಲ ಪ್ರೀತಿಯ ಮಾತು ಎಂತಹ ಬೆಂದ ಹೃದಯಕ್ಕೂ ತಂಪೆರೆಯಬಲ್ಲದು ಎಂಬುದು ಗಾಂಧಿಯವರ ಸಿದ್ಧಾಂತವಾಗಿತ್ತು. ಎಂಥದ್ದೇ ಕಠಿಣ ಪರಿಸ್ಥಿತಿಯಲ್ಲೂ ಅವರು ಹಿಂಸೆಯನ್ನು ಪ್ರಚೋದಿಸಲಿಲ್ಲ. ಅವರು ಅದೆಷ್ಟೇ ಬಾರಿ ಜೈಲು ಸೇರಿದರೂ ಎಂದೂ ಶಾಂತಿಭಂಗವನ್ನು ಸಹಿಸಲಿಲ್ಲ ನುಡಿದಂತೆಯೇ ನಡೆದರು, ಶಾಂತಿಯ ಸಾರ್ವಭೌಮತೆಯನ್ನು ಮೆರೆದರು .
**ಸತ್ಯಾಗ್ರಹ–** ಶಾಂತಿಯುತ ಸತ್ಯಾಗ್ರಹ ಅವರ ಶಕ್ತಿಯಾಗಿತ್ತು. ಬಂಗಾಳದ ವಿಭಜನೆ ಅವರಿಗೆ ತುಂಬ ನೋವನ್ನುಂಟು ಮಾಡಿತ್ತು. ಸ್ವಯಂ ದಂಡನೆ, ಉಪವಾಸಗಳು ಅವರು ತಮ್ಮನ್ನು ತಾವು ನಿಯಂತ್ರಿಸಿಕೊಳ್ಳಲು ಮತ್ತು ತಮ್ಮ ಅಸಹನೆಯನ್ನು ತೋರಿಸಿಕೊಳ್ಳಲು ಉಪಯೋಗಿಸುತ್ತಿದ್ದ ಅಸ್ತ್ರಗಳು. ಅವರೇ ಹೇಳುವಂತೆ ಉಪವಾಸ ಮೈಮನಗಳ ಕೊಳೆಯನ್ನು ಕಳೆಯುವ ಸಾಧನವಾಗಿತ್ತು.
**ಪ್ರಾರ್ಥನೆ–** ಸಾಮೂಹಿಕ ಪ್ರಾರ್ಥನೆ ಮನುಷ್ಯನನ್ನು ಶಾಂತನನ್ನಾಗಿಸುತ್ತದೆ ಒಂದೇ ಏರಿಳಿತದಲ್ಲಿ ಸರ್ವರೂ ಪ್ರಾರ್ಥನೆ ಮಾಡುವಾಗ ಉಂಟಾಗುವ ಕಂಪನಗಳು ಎಲ್ಲರಲ್ಲೂ ಅಮೂರ್ತ ಭಾವನೆಯನ್ನು ಉಂಟು ಮಾಡುತ್ತವೆ ಎಂಬುದು ಅವರ ಅಭಿಪ್ರಾಯವಾಗಿತ್ತು .ಪ್ರಾರ್ಥನೆ ಎಲ್ಲರನ್ನು ಒಗ್ಗೂಡಿಸುತ್ತದೆ ಎಂಬ ಏಕತ್ವದ ಕಲ್ಪನೆ ಅವರದಾಗಿತ್ತು .
**ಸರಳತೆ–** ಸರಳತೆ ಅವರ ಶಕ್ತಿಯಾಗಿತ್ತು. ಸದೃಢ ಸಶಕ್ತ ಭಾರತ ನಿರ್ಮಾಣಕ್ಕೆ ಗುಡಿಕೈಗಾರಿಕೆಗಳು ಕೊಡಬಲ್ಲ ಕೊಡುಗೆಗಳ ಅರಿವು ಅವರಿಗಿತ್ತು. ಪ್ರತಿ ಹಳ್ಳಿಯೂ ಸಣ್ಣಪುಟ್ಟ ಕೈಗಾರಿಕೆಗಳನ್ನು ಹೊಂದಿದರೆ ಆರ್ಥಿಕವಾಗಿ ಸದೃಢವಾಗಿ ನಿಲ್ಲಬಹುದು. ರೈತ ನಾಡಿನ ಬೆನ್ನೆಲುಬು, ರೈತನಿಂದಲೇ ಅನ್ನ ಎಂದು ಅವರು ಹೇಳುತ್ತಿದ್ದರು .
**ಸಮಾನತೆ–** ಗಾಂಧಿಯವರ ಸಾಬರಮತಿ ನದಿಯ ದಂಡೆಯಲ್ಲಿರುವ ಆಶ್ರಮದಲ್ಲಿ ಇದ್ದಾಗ ಒಂದೊಮ್ಮೆ ಕಸ್ತೂರ್ಬಾ ಯಾವುದೋ ಕೆಲಸದ ನಿಮಿತ್ತ ಹೊರಗೆ ಹೋಗುತ್ತಿದ್ದ ತಮ್ಮ ಮಗನಿಗೆ ಕೆಲವು ರೊಟ್ಟಿಗಳನ್ನು ಮಾಡಿ ಕೊಟ್ಟರು. ಆದರೆ ಅದನ್ನು ಒಪ್ಪದ ಗಾಂಧಿ ಮಗನಿಗೆ ರೊಟ್ಟಿಗಳನ್ನು ಒಯ್ಯದೆ ಇರಲು ತಾಕೀತು ಮಾಡಿದರು .ಇದು ಅವರು ಸರ್ವಜನರನ್ನು ಸಮನಾಗಿ ನೋಡುವ ವಿಶಾಲ ದೃಷ್ಟಿಕೋನ.

ಕೆಲವು ವಿರುದ್ಧ ಮಾಹಿತಿಗಳು ಹೀಗಿವೆ. ಗಾಂಧೀಜಿಯವರು ಮನೆಗೆ ಮಾರಿ ಊರಿಗೆ ಉಪಕಾರಿ ಎಂದು ....

ವ್ಯಕ್ತಿ ಸಮುದಾಯದ ಶಕ್ತಿ ಆಗುವಾಗ ಈ ರೀತಿಯ ಸಮಾನ ಮನೋಭಾವವನ್ನು ಹೊಂದುವುದು ಅತ್ಯವಶ್ಯಕ ಎಂಬುದು ಗಾಂಧಿಯವರ ಅಭಿಪ್ರಾಯವಾಗಿತ್ತು ಅವರು ಹಾಗೆಯೇ ನಡೆದುಕೊಂಡರು ಕೂಡ.

ಅಂತಿಮವಾಗಿ ಗಾಂಧಿಯವರ ಬಗ್ಗೆ ಹೇಳಬೇಕಾದ ಒಂದು ವಿಷಯವಿದೆ. ಗಾಂಧಿಯವರ ಹತ್ಯೆಯಾದ ಸುದ್ದಿ ವಿಶ್ವಸಂಸ್ಥೆಯನ್ನು ತಲುಪಿದಾಗ ವಿಶ್ವಸಂಸ್ಥೆಯ ಧ್ವಜದ ಜೊತೆಗೆ ಇಡೀ ಜಗತ್ತಿನ ಎಲ್ಲಾ ಸದಸ್ಯ ರಾಷ್ಟ್ರಗಳ ಧ್ವಜಗಳನ್ನು ಅರ್ಧಕ್ಕೆ ಇಳಿಸಲಾಯಿತು. ಯಾವುದೇ ಒಂದು ದೇಶದ ಪ್ರಧಾನಿ ಇಲ್ಲವೇ ಅಧ್ಯಕ್ಷರು ಮಡಿದಾಗ ಮಾತ್ರ ಆ ದೇಶದ ಧ್ವಜ ಮತ್ತು ವಿಶ್ವಸಂಸ್ಥೆಯ ಧ್ವಜವನ್ನು ಅರ್ಧಕ್ಕೆ ಇಳಿಸಲಾಗುತ್ತದೆ ...ಆದರೆ ಗಾಂಧಿ ಯಾವುದೇ ದೇಶದ ಪ್ರಧಾನಿಯಾಗಲಿ ಅಧ್ಯಕ್ಷರಾಗಲೀ ಆಗಿರಲಿಲ್ಲ ಆದರೂ ವಿಶ್ವಸಂಸ್ಥೆಯು ಅವರಿಗೆ ಈ ಗೌರವವನ್ನು ನೀಡಿತು. .ಪತ್ರಕರ್ತೆಯರ ಸಮೂಹವೊಂದು ಈ ಬಗ್ಗೆ ಪ್ರಶ್ನೆ ಮಾಡಿದಾಗ ಅವರು ಹೇಳಿದ ಉತ್ತರ "ಇಂದು ಕೇವಲ ಗಾಂಧಿಯವರು ಸಾಯಲಿಲ್ಲ, ಮಾನವೀಯತೆಯೇ ಸತ್ತು ಹೋಯಿತು.ಮುಂದೊಂದು ದಿನ ಜಗತ್ತು ಇಪ್ಪತ್ತನೆಯ ಶತಮಾನದಲ್ಲಿ ಇಂತಹ ಓರ್ವ ಸಂತ ಬದುಕಿದ್ದನೇ ಎಂದು ಅಚ್ಚರಿ ಪಡುವಂತಹ ವ್ಯಕ್ತಿ ಗಾಂಧಿ" ಎಂದು ವಿಶ್ವಸಂಸ್ಥೆಯ ಅಧ್ಯಕ್ಷರು ಹೇಳಿದರು . ಇಷ್ಟು ಸಾಕಲ್ಲವೇ ಗಾಂಧಿಯವರ ಮಹತ್ವ ನಮಗೆ ತಿಳಿಯಲು .

ಗಾಂಧೀಜಿಯವರು ಅತ್ಯಂತ ಆಸ್ತೆಯಿಂದ ಮಾಡುತ್ತಿದ್ದ ಸ್ವಚ್ಛತೆಯನ್ನು, ವಾದ ಮತ್ತು ಸಾಬರಮತಿ ಆಶ್ರಮದಲ್ಲಿ ಅವರು ಸ್ವಚ್ಛತಾ ಕಾರ್ಯಗಳನ್ನು ಖುದ್ದು ತಾವೇ ನಿರ್ವಹಿಸುತ್ತಿದ್ದನ್ನು ನಾವು ಕೇಳಿದ್ದೇವೆ. 1924ರಲ್ಲಿ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ನಡೆದಿದ್ದು ಪ್ರಸ್ತುತ 2024ರಲ್ಲಿ ಬೆಳಗಾವಿಯ ಕಾಂಗ್ರೆಸ್ ಅಧಿವೇಶನಕ್ಕೆ ನೂರು ವರ್ಷ ಆಗಿರುವ ಪ್ರಯುಕ್ತ ಕರ್ನಾಟಕದಲ್ಲಿ ಈ ವರ್ಷದ ಗಾಂಧಿ ಜಯಂತಿಯ ಸಂಭ್ರಮಕ್ಕೆ ಶತಮಾನೋತ್ಸವದ ಸಂಭ್ರಮವೂ ಜೊತೆಗೂಡಿದೆ. ಪ್ರಸ್ತುತ ವರ್ಷ ಗಾಂಧೀಜಿಯವರ 155ನೇ ಹುಟ್ಟುಹಬ್ಬದ ಅಂಗವಾಗಿ ಸ್ವಚ್ಛತಾ ಆಂದೋಲನವನ್ನು ಆಚರಿಸುತ್ತಿದ್ದು, ಕರ್ನಾಟಕದ ಎಲ್ಲೆಡೆ ಶಾಲಾ ಕಾಲೇಜುಗಳ ಮಕ್ಕಳು ಸ್ವಚ್ಛತಾ ಆಂದೋಲನ ಪ್ರತಿಜ್ಞಾವಿಧಿಯನ್ನು ಗಾಂಧಿ ಜಯಂತಿಯ ದಿನ ಮುಂಜಾನೆ 10 ಗಂಟೆಗೆ ಸ್ವೀಕರಿಸಲಿದ್ದಾರೆ. ತಮಗೆ ಗಾಂಧಿ ಜಯಂತಿಯ ಶುಭಾಶಯಗಳು

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಅಧಿಕಾರಕ್ಕೂ, ಅನುಭವಕ್ಕೂ ವ್ಯತ್ಯಾಸ ಇದೆ ಕಣ್ರೀ



ಅಲ್ಲೊಂದು ಕಂಪನಿಯ ಸಭೆ ನಡೆಯುತ್ತಿತ್ತು, ಕಿರಿಯ ವಯಸ್ಸಿನ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಯೊಬ್ಬ ಅಲ್ಲಿಗೆ ಬಂದು ಗುಡುಗಲು ಆರಂಭಿಸಿದನು, ಏನ್ರಿ ನಿಮಗೆ ಬುದ್ಧಿಯಿಲ್ಲ, ನಾನು ಬಂದ್ರು ಕೂಡ ನೀವು ಕುಳಿತುಕೊಂಡಿದ್ದೀರಿ, ಉನ್ನತ ಅಧಿಕಾರಿ ಅಂತ ಸ್ವಲ್ಪ ಕಾಮನ್ ಸೆನ್ಸ್ ಬೇಡ್ವಾ? ಎನ್ನುತ ಗುಡುಗಿದ್ದಾಗ, ಅಲ್ಲೊಬ್ಬ ಹಿರಿಯ ನೌಕರಸ್ಥ ನಿಲ್ಲಲು ಆಗದೆ ತಡವರಿಸುತ್ತಿದ್ದರು, ಮತ್ತೆ ಎನಯ್ಯ ಯಾಕೆ ಹೀಗೆ ಮಾಡ್ತಿಯಾ, ನೀನು ಸಮರ್ಥ ಇಲ್ಲದಿದ್ದರೆ ನಿವೃತ್ತಿ ಪಡೆಯಬೇಕು ಎಂದನು....

ಆತ ಅಸಹಾಯಕನಾಗಿ ಸುಮ್ಮನೆ ಇದ್ದರು..... ಅಲ್ಲಿ ಮುಂದೆ ಚರ್ಚೆಗಳು ಆರಂಭ ಆದವು, ಎಲ್ಲ ತರಬೇತುದಾರರ ಹಾಗೂ ಅಧಿಕಾರಿಗಳ ನಡುವೆ ಪ್ರಶ್ನೆಗಳು, ಸಲಹೆಗಳು ಹಾಗೂ ಚರ್ಚೆಗಳು ಆರಂಭ ಆದವು. ನಮ್ಮ ಕಂಪನಿಯು ಆರ್ಥಿಕ ನಷ್ಟ ಅನುಭವಿಸುತ್ತಿದ್ದು ಈಗ ಇನ್ನೂ ಹೆಚ್ಚಿನ ಸಂಖ್ಯೆಯ ನೌಕರರ ಆಯ್ಕೆ ಮಾಡುವುದಿದೆ, ನಮ್ಮ ಕಂಪನಿಯು ಆರ್ಥಿಕವಾಗಿ, ಭೌತಿಕವಾಗಿ ಎಲ್ಲವೂ ಅನುಕೂಲತೆ ಹೊಂದಿದ್ದರು ಕೂಡ ಯಾಕೆ ನಷ್ಟ ಅನುಬಭವಿಸುತ್ತಿದೆ? ಎನ್ನುವ ಪ್ರಶ್ನೆ ಕಂಪನಿಯ ಮಾಲೀಕನ ಅಳಲು ಆಗಿತ್ತು. ಈಗ ಹೆಚ್ಚಿನ ನೌಕರರ ಆಯ್ಕೆ ಇದೆ. ಇಲ್ಲಿ ನೌಕರರ ಆಯ್ಕೆ ಸಮಿತಿಯ ಸಭೆ ಕರೆಯಲಾಗಿತ್ತು.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Scan For Digital Colourful
HAMPI TIMES E-paper

ನೀವು ಯಾವ ಯಾವ ಆಧಾರದ ಮೇಲೆ ಹುದ್ದೆಗೆ ಆಯ್ಕೆ ಮಾಡಿಕೊಳ್ಳುತ್ತೀರಿ ಎನ್ನುವ ಮಾಲೀಕನ ಪ್ರಶ್ನೆಗೆ ಉನ್ನತ ಅಧಿಕಾರಿಗಳು ಹೇಳಿದ್ದು ರಾಂಕ್‌ನಲ್ಲಿ ಅಂಕಗಳು ಇರಬೇಕು, ಇಂಗ್ಲಿಷ್ ಭಾಷೆ ಬರಬೇಕು, ಅವರು ಸೂಟ್‌ಬೂಟ್ ಧರಿಸಲೆಬೇಕು ಎನ್ನುತಿದಂತ್ತೆ, ಇನ್ನೊಬ್ಬ ಹೇಳಿದ ಇಲ್ಲ ಸರ್ ಆಂಗ್ಲ ಮಾಧ್ಯಮದರಿಗೆ ಮೊದಲ ಆದ್ಯತೆ ಕೊಡಿ, ಇನ್ನೊಬ್ಬ ಇಲ್ಲ ಅರ್ಬನ್‌ನಲ್ಲಿ ಕಲಿತವರಿಗೆ ಆಧ್ಯತೆ ಕೊಡಿ, ಮತ್ತೊಬ್ಬ ಹೇಳಿದ ಇಲ್ಲ ಇದೆಲ್ಲ ಬೇಡ ನಾವು ಈ ಕಂಪನಿಯಲ್ಲಿ ಸೇವೆ ಮಾಡುತ್ತಿದ್ದೇವೆ ನಮ್ಮ ಮಕ್ಕಳಿಗೆ ಅವಕಾಶ ಕೊಡಿ ಬೇರೆಯವರಿಗೆ ಯಾಕೆ? ಹೀಗೆ ಒಬ್ಬೊಬ್ಬರು ತಮ್ಮದೆ ವಿಚಾರಗಳನ್ನು ಹೇಳುತ್ತಿದ್ದರು, ಇಲ್ಲಿ ಕಂಪನಿ ಮಾಲೀಕನಿಗೆ ತುಂಬಾ ಬೇಸರವಾಯಿತು.

ಇವರೆಲ್ಲ ಸ್ವಾರ್ಥಿಗಳು, ನಮ್ಮ ಕಂಪನಿಗೆ ಬೇಕಾಗಿರುವುದು ಸಮರ್ಥ ಕೆಲಸಗಾರ, ಬಹುಶಃ ಇವರನ್ನು ಒಳಗೊಂಡ ಆಯ್ಕೆ ಸಮಿತಿಯೆ ಈ ಹಿಂದಿನ ನೌಕರರ ಆಯ್ಕೆ ಮಾಡಿದಕ್ಕೆ ನನ್ನ ಕಂಪನಿ ನಷ್ಟ ಹೊಂದುತ್ತಿದೆ ಎನ್ನುವ ಇವರ ನೋವು ಕೆಲವು ಹಿರಿಯ ನೌಕರರಿಗೆ ಅರ್ಥ ಆಯಿತು. ಆಗ ಅಲ್ಲಿ ಕುಳಿತ್ತಿರುವ ಹಿರಿಯ ಅನುಭವಿ ನೌಕರ ಒಬ್ಬರು ಗಟ್ಟಿಯಾದ ಧ್ವನಿಯಲ್ಲಿ ಮಾತನಾಡುತ್ತ ನಿಧಾನಕ್ಕೆ ಎದ್ದು ನಿಂತು ಮಾತನಾರಂಭಿಸಿದರು, ಈ ಕಂಪನಿಯ ನಷ್ಟಕ್ಕೆ ಎಲ್ಲೋ ಒಂದು ಕಡೆ ನಾನು ಕೂಡ ಕಾರಣ ಇದ್ದೆನೆ ಎನ್ನುವಾಗ ಎಲ್ಲರೂ ಆತನ ಕಡೆಗೆ ನೋಡಲಾರಂಬಿಸಿದರು, ಉತ್ತಮ ನೌಕರರ ಲಕ್ಷಣ ಎಂದರೆ ಮೊದಲ ಆದ್ಯತೆ ಗ್ರಾಮೀಣ ವಿದ್ಯಾರ್ಥಿಗಳಿಗೆ, ಎರಡನೆಯದು ಕನ್ನಡ ಮಾಧ್ಯಮ, ಕೆಲಸಕ್ಕೆ ಸೇರುವ ಉದ್ದೇಶ ಕೇವಲ ವೃತ್ತಿಗಾಗಿ ಅಲ್ಲ ವೃತ್ತಿಗೆ ತನ್ನ ಕರ್ತವ್ಯಕ್ಕೆ ಗೌರವ ಕೊಡಬೇಕು, ಕೃಪಾಂಕದ ಜೊತೆಗೆ ಸಾಧಾರಣ ಉಡಿಗೆ ತೊಡಿಗೆ ಹಾಗೂ ಎಲ್ಲದಕ್ಕೂ ಮಿಗಿಲ್ಲಾಗಿ ಸಭ್ಯತೆ ಸಂಸ್ಕೃತಿ ಹಾಗೂ ಹಿರಿಯರನ್ನು ಗೌರವಿಸುವ ಮನೋವೃತ್ತಿ ಇರುವ ಯುವಕರನ್ನು ಆಯ್ಕೆ ಮಾಡಿ ಎಂದು ಸಲಹೆ ನೀಡುತ್ತಿದಂತ್ತೆ ವೇದಿಕೆಯ ಮೇಲೆ ಇದ್ದ ಮಗ ಅಪ್ಪನ ಬಳಿಗೆ ಓಡೋಡಿ ಬಂದು ಕ್ಷಮೆ ಕೇಳಿದನು.

ನೋಡಿ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳು ಹಿರಿಯರು ಕಿರಿಯರು ಎನ್ನುವತ್ತ ಗಮನ ಕೊಡದೆ,ಎಕ ವಚನದಲ್ಲಿ ಮತನಾಡುತ್ತಿರುವುದು, ಎ ಅಮ್ಮ ನಿನಗೆ ಗೊತ್ತಾಗಲ್ಲಾ್ವ? ಏನಪ್ಪ ನಿನಗೆ ತಿಳಿಯೋದಿಲ್ವ? ಬಾರೊ, ಹೋಗೊ ಏನ್ರಿ ಇದು, ತಂದೆಯ ತಾಯಿಯ ವಯಸ್ಸಿನವರು ಇರುತ್ತಾರೆ,ಅವರ ಅನುಭವದ ವಯಸ್ಸಿನಷ್ಟು ವಯಸ್ಸು ಕೂಡ ಇಲ್ಲದ ನಮ್ಮಲ್ಲಿ ಹುದ್ದೆಯ ಅಹಂಕಾರ, ಗರ್ವ ಯಾಕೆ ಬೇಕು? ಹಿರಿಯರನ್ನು ಗೌರವಿಸವುದು, ಕಿರಿಯರನ್ನು ಮಾರ್ಗದರ್ಶನ ಮಾಡುವುದು, ಸಮ ವಯಸ್ಸಿನವರ ಜೊತೆಗೆ ಆತ್ಮೀಯತೆ ಇಂದ ಇರುವುದು ಭಾರತೀಯರ ಸಂಸ್ಕೃತಿ ಅಲ್ಲವೆ..

ಕವಿ ಮನಸು

## ಬಯಕೆ



ಪಿಸುಮಾತು ಉಸುರುವೆನು
ತುಸು ಧ್ಯಾಸ ಇಡು ಇನಿಯ
ಇರುಳು ಮಾತಿದು ಕೇಳು
ಮರು ಮಾತಾಡದೆ ಬಾ ಸನಿಹ

ಹಿಡಿದಿರುವ ಪುಸ್ತಕವಾ ತುಸು
ಹೊತ್ತು ಪಕ್ಕಕಿಡು
ನಿನ್ನ ಈ ಮಸ್ತಕಕೆ ಸೇರಿಸುವ
ವಿಷಯ ಎನ್ನ ಬಳಿ ಇದೆ

ನಸುಕಾದ ಬೆಳಕಿನಲಿ ಸಂಗಾತಿಯ
ಶೃಂಗಾರ ಕಾವ್ಯವಿದೆ
ಎನ್ನ ಹೃದಯದ ವೀಣೆ ಮೀಟಿದೆಡೆ
ನವ ರಾಗದ ಉದಯವಿದೆ

ಎಷ್ಟು ಪುಸ್ತಕಗಳ ಓದಿದೆ ನೀನೆಂದು
ಯಾರೂ ಕೇಳರು ನಿನಗೆ
ಎಷ್ಟು ಧನ ಕನಕ ಗಳಿಸಿದೆ ಎಂದು
ಯಾರು ಕೇಳರು ನಿನಗೆ

ಎಲ್ಲರ ಕೇಳುವ ಪ್ರಶ್ನೆ ಒಂದೇ ಒಂದು
ಎಷ್ಟು ಮಕ್ಕಳವ್ವ ನಿನಗೆಂದು
ದಯಪಾಲಿಸೋ ಪತಿದೇವ ನೀನಿಂದು
ಮುದ್ದಾದ ಮಗುವ ನನಗೆಂದು

ಹೊರಗೆ ಹೋಗಲು ನೆರೆಮನೆ ಅಜ್ಜಿ
ಕೇಳುವಳು ಇಲ್ಲವೇನೇ ಹೊಸ ಸುದ್ದಿ
ಮದುವ್ಯಾಗಿ ಮೂರು ವರ್ಷವಾಯಿತಲ್ಲೆ
ಮುದ್ದು ಮೊಮ್ಮಗು ಇಲ್ಲ ಕೈಯಲ್ಲಿ

ತವರಿಗೆ ಕರೆ ಮಾಡಿ ಅಮ್ಮನಿಗೆ ಹೇಳಿದೆ
ನಿನ್ನ ನೋಡುವಾಸೆ ಎನಗೆ
ಅಮ್ಮನ ಮರುತ್ತರ ಶುರುವಾಗಿದೆ ಏನೇ
ಹೊಸ ಬಯಕೆ ನಿನಗೆ

ಗಂಡಾದರೂ ಆಗಲಿ ಹೆಣ್ಣಾದರೂ ಆಗಲಿ
ಎಮಗೊಂದು ಮಗುವಾಗಲಿ
ಅವರಿವರಿಂದ ಬೈಸಿಕೊಳ್ಳುವುದು ತಪ್ಪಲಿ
ಬಂಜೆ ಎನ್ನುವ ಮಾತು ಬರುವ ಮೊದಲೇ

– ಕೆ ಎಂ ಬಸವರಾಜ ಹೊಸಪೇಟೆ

## ನವರಾತ್ರಿ

ಮೊದಲ ದಿನ ಬರುವಳು ಶೈಲಪುತ್ರಿಯು
ದ್ವಿತೀಯ ದಿನದಿ ಬರುವಳಮ್ಮ ಬ್ರಹ್ಮಚಾರಿಣಿ
ಧೈರ್ಯವನ್ನು ನೀಡುವಳು ನಮಗೆ ಚಂದ್ರಘಂಟಾ
ಶಕ್ತಿಯನ್ನು ನೀಡುವಳೆಮಗೆ ಕುಷ್ಮಾಂಡ ದೇವಿಯು
ಮಗುವನ್ನು ಮಡಿಲಲ್ಲಿ ತರುವಳು ಸ್ಕಂದಮಾತೆಯು

ಶುದ್ಧಮನದಿ ಪೂಜಿಸಲು ಹರಸುವಳು
ಕಾತ್ಯಾಯಿನಿಯು
ಉಗ್ರರೂಪವಿದು ಕಾಳರಾತ್ರಿಯು
ಜ್ಞಾನವ ನೀಡುವಳು ಮಹಾ ಗೌರಿಯು
ಭಕ್ತರು ಬೇಡಿದ್ದು ಸಿದ್ಧಿಸುವಳು ಸಿದ್ಧಿದಾತ್ರಿ
ಕಾಪಾಡುವ ತಾಯಿ ನಿಮಗೆ ಶರಣೆಂಬೆನಮ್ಮ

ನವರಾತ್ರಿಯಲಿ ದಿನವು ಬರುವಳು ನವ ಅವತಾರದಿ
ನಡೆಯುವುದು ನವದುರ್ಗೆಯರಿಗೆ ಪೂಜೆ
ಹರಕೆಯ ಒಪ್ಪಿಸುವರು ಭಕ್ತವೃಂದವು
ದುಷ್ಟರ ಸಂಹರಿಸಿ ವಿಜಯ ಸಾಧಿಸಿದ ದೇವಿಗೆ
ವಿಜಯ ದಶಮಿಯ ಉತ್ಸವದ ಪೂಜೆಯು.

– ಸುವರ್ಣಾ ಭಟ್ಟ

## ಮಹಾತ್ಮ ಗಾಂಧೀಜಿ

ಸತ್ಯಾಗ್ರಹದ ಸಂತರಿವರು
ಆಂಗ್ಲರನು ಹೊಡೆದೋಡಿಸಿದರು
ಅಹಿಂಸೆಯ ಪ್ರತಿಪಾದಕರು
ಭಾರತೀಯರ ನೆಚ್ಚಿನ ರಾಷ್ಟ್ರಪಿತರು

ಸ್ವಾತಂತ್ರ್ಯ ಸಂಗ್ರಾಮದ ನೇತಾರರು
ಭಾರತೀಯರ ನೆಚ್ಚಿನ ತಾತನಿವರು
ಶಾಂತಿಯ ಸಂದೇಶವ ಸಾರಿದರು
ಸತ್ಯ ಮಾರ್ಗದಲ್ಲಿ ನಡೆದರು
ಗಾಂಧೀಜಿಯವರು
ನಡೆಯುವುದು ನವದುರ್ಗೆಯರಿಗೆ ಪೂಜೆ
ಹರಕೆಯ ಒಪ್ಪಿಸುವರು ಭಕ್ತವೃಂದವು
ದುಷ್ಟರ ಸಂಹರಿಸಿ ವಿಜಯ ಸಾಧಿಸಿದ ದೇವಿಗೆ
ವಿಜಯ ದಶಮಿಯ ಉತ್ಸವದ ಪೂಜೆಯು.

– ಚೇತನ್ ಭಾರ್ಗವ್

# ಅವಿಭಜಿತ ಬಳ್ಳಾರಿ ಜಿಲ್ಲೆಗೆ ಮಹಾತ್ಮ ಗಾಂಧೀಜಿ ಬಂದಿದ್ದು ಚಾರಿತ್ರಿಕ ಘಟನೆ

ದೇಶದ ಸ್ವಾತಂತ್ರ್ಯಕ್ಕಾಗಿ, ಜನರ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ. ಸುಮಾರು ಎರಡು ಶತಮಾನಗಳ ಕಾಲ ಬ್ರಿಟಿಷರ ದಾಸ್ಯದಲ್ಲಿದ್ದ ಭಾರತವನ್ನು ಮುಕ್ತಗೊಳಿಸುವ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರ ವ್ಯಾಪಿ ನಡೆದ ಚಳುವಳಿಯ ನೇತೃತ್ವವನ್ನು ಗಾಂಧೀಜಿಯವರು ವಹಿಸಿಕೊಂಡು ಈ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟವರು. ಸ್ವಾತಂತ್ರ್ಯ ಚಳವಳಿಯಸಂದರ್ಭದಲ್ಲಿ ಗಾಂಧೀಜಿಯವರು ದೇಶದ ಯಾವುದೇ ಮೂಲೆಯಲ್ಲಿ ಕುಳಿತು ಹೋರಾಟಕ್ಕೆ ಒಂದು ಕರೆಕೊಟ್ಟರೆ ಸಾಕು ಇಡೀ ದೇಶವೇ ಅವರ ಬೆಂಬಲಕ್ಕೆ ಇರುತ್ತಿತ್ತು. ಗಾಂಧೀಜಿಯವರನ್ನು ಸ್ವಾತಂತ್ರ್ಯ ಯೋಧ, ಸತ್ಯಾಗ್ರಹಿ, ತತ್ವಜ್ಞಾನಿ, ಯುಗಪುರುಷ, ಮಹಾತ್ಮ ಎಂದೆಲ್ಲ ಅವರನ್ನು ಕರೆದರೂ ಅವರ ಪೂರ್ಣವಾದ ವ್ಯಕ್ತಿತ್ವವನ್ನು ಕಟ್ಟಿಕೊಡಲು ಇದುವರೆಗೂ ಸಾಧ್ಯವಾಗುತ್ತಿಲ್ಲ. ಜನತೆಯ ಕಲ್ಯಾಣಕ್ಕಾಗಿ ಅವರು ತಮ್ಮನ್ನು ಸಮರ್ಪಿಸಿಕೊಂಡಿದ್ದರು. ಗಾಂಧೀಜಿಯವರನ್ನು ಕುರಿತು ಬಂದಷ್ಟುಸಾಹಿತ್ಯ, ವಿಮರ್ಶೆ, ಟೀಕೆ ಟಿಪ್ಪಣಿಗಳು ಜಗತ್ತಿನ ಯಾವ ವ್ಯಕ್ತಿಯ ಬಗ್ಗೆಯೂ ಇದುವರೆಗೂ ಬಂದಿಲ್ಲ, ಈಗಲೂ ಗಾಂಧಿ ವ್ಯಕ್ತಿತ್ವದ ಆಳ ಅಗಲಗಳ ಬೆರಗು ಹುಟ್ಟಿಸುತ್ತಲೇ ಇದೆ.

ರಕ್ತ ಮೂಳೆ ಮಾಂಸಗಳಿಂದ ಕೂಡಿದಇಂತಹ ವ್ಯಕ್ತಿ ಭೂಮಿಯ ಮೇಲೆ ಬದುಕಿದ್ದರೆ, ಜಗತ್ತಿನಲ್ಲಿ ಸಂಚರಿಸಿದ್ದರೆ, ಎಂದು ಮುಂಬರುವ ಪೀಳಿಗೆ ಸಂಶಯ ವ್ಯಕಪಡಿಸಬಹುದು ಎಂದು ಐನ್ಸಟೀನ್ ಹೇಳಿದ ಮಾತು ಈ ಶತಮಾನದಲ್ಲೇ ಸತ್ಯವಾಗುತ್ತಿದೆ. ಆ ವಿಸ್ಮಯ ವ್ಯಕ್ತಿತ್ವದ ಮಹಾತ್ಮ ಗಾಂಧಿ ಸ್ವಾತಂತ್ರ್ಯ ಹೋರಾಟ ಮತ್ತು ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ಕಾಗಿ ನಿಧಿ ಸಂಗ್ರಹಿಸುವ ಸಲುವಾಗಿ ಅವರು ಕರ್ನಾಟಕಕ್ಕೆ ಹಾಗೇನೆ ಬಳ್ಳಾರಿ ಜಿಲ್ಲೆಗೆ ಬಂದಿದ್ದವರು. ಅವರು ಅವಿಭಜಿತ ಬಳ್ಳಾರಿ ಜಿಲ್ಲೆಗೆ ಎರಡು ಬಾರಿ ಬಂದಿದ್ದು ಹಾಗೂ ಹರಪನಹಳ್ಳಿ, ಸೊಂಡೂರು, ಬಳ್ಳಾರಿಯಲ್ಲಿ ವಾಸ್ತವ್ಯ ಮಾಡಿದ್ದು ಸಹ ಚಾರಿತ್ರಿಕವಾದದ್ದಾಗಿದೆ. ಮಹಾತ್ಮ ಗಾಂಧೀ ಜಯಂತಿ ಸಂದರ್ಭದಲ್ಲಿ ಅವರ ಅಖಂಡ ಬಳ್ಳಾರಿ ಜಿಲ್ಲೆಯ ನೆಲದಲ್ಲಿ ಓಡಾಡಿ, ವಾಸ್ತವ್ಯ ಮಾಡಿದ್ದರ ಪ್ರವಾಸ ಕುರಿತ ಮಾಹಿತಿ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ಗಾಂಧೀಜಿಯವರು 1921ಹಾಗು 1934 ರಲ್ಲಿ ಅಖಂಡ ಬಳ್ಳಾರಿ ಜಿಲ್ಲೆಗೆ ಬಂದಿದ್ದರು. ದೇಶಪರಾಟನೆ ನಡೆಸಿ ನಿಜವಾದ ಭಾರತವನ್ನು ಅರಿಯಬೇಕು ಎಂಬ ಸಲಹೆ ಎದ್ದೆ ಭಾರತದ ತುಂಬಾ ಪ್ರಯಾಣ ಮಾಡುವ ಸಂದರ್ಭದಲ್ಲಿ ಅಕ್ಟೋಬರ್ 1,1921 ರಂದು ಮೊದಲ ಬಾರಿಗೆ ಬಳ್ಳಾರಿಗೆ ಬಂದಿದ್ದರು. ಎರಡನೇ ಬಾರಿ ಮಾರ್ಚ್ ಎರಡು ಮತ್ತು ಮೂರು 1934 ರಲ್ಲಿ ಹರಪನಹಳ್ಳಿ ಕೊಟ್ಟೂರು ಕೂಡ್ಲಿಗಿ ಸಂಡೂರು ಬಳ್ಳಾರಿ ಹಾಗೂ ಹೊಸಪೇಟೆ ಮಾರ್ಗವಾಗಿ ಹುಬ್ಬಳ್ಳಿಗೆ ಪ್ರವಾಸ ಮಾಡಿದ್ದರು ಮಹಾತ್ಮ ಗಾಂಧೀಜಿ ಯವರ ಬಳ್ಳಾರಿಗೆ ಬಂದಿದ್ದ ಸಂದರ್ಭದಲ್ಲಿ ಬಳ್ಳಾರಿ ಕಾಂಗ್ರೆಸ್ ಸಮಿತಿಯಲ್ಲಿ ಗೊಂದಲದ ವಾತಾವರಣವೆ ಕಾರಣ

.ಬಳ್ಳಾರಿಯನ್ನು ಆಂಧ್ರ ಪ್ರಾಂತ್ಯಕ್ಕೆ ಸೇರಿಸಬೇಕು ಎನ್ನುವುದು ತೆಲುಗರ ಉದ್ದೇಶವಾಗಿದ್ದರೆ, ಬಳ್ಳಾರಿ ಕರ್ನಾಟಕದಲ್ಲಿ ಉಳಿಯಬೇಕೆಬುಂದು ಕನ್ನಡಿಗರು ಉದ್ದೇಶವಾಗಿತ್ತು. ಬಳ್ಳಾರಿ, ಕರ್ನಾಟಕದಲ್ಲೇಇರಬೇಕೊ ಅಥವಾ ಆಂಧ್ರಕ್ಕೆ ಸೇರಬೇಕೊಎನ್ನುವ ವಿಚಾರದಲ್ಲಿ ಬಳ್ಳಾರಿಯ ಕಾಂಗ್ರೆಸ್ ಸಮಿತಿಯಲ್ಲಿ ಎರಡು ಗುಂಪುಗಳಾಗಿ ತಮ್ಮ ತಮ್ಮ ವಿಚಾರಕ್ಕೆ ಅಂಟಿಕೊಂಡಿದ್ದವು.ಈ ಸಂದರ್ಭದಲ್ಲಿ ಗಾಂಧೀಜಿಯವರನ್ನು ಸ್ವಾಗತಿಸಲು ಎರಡು ಬಣ್ಣದವರು ರೈಲು ನಿಲ್ದಾಣಕ್ಕೆ ಬಂದಿದ್ದರು. ಈ ಸಂದರ್ಭದಲ್ಲಿ ತಮ್ಮ ಸದಸ್ಯರನ್ನು ಉದ್ದೇಶಿಸಿ ಮಾತನಾಡಬೇಕೆಂದು ಎರಡು ಬಣಗಳ ಉದ್ದೇಶವಾಗಿತ್ತು. ಆದರೆ ಗಾಂಧೀಜಿಯವರು ಭಾಷೆಯ ವಿಷಯದಲ್ಲಿ ಕಾಂಗ್ರೆಸ್ಸ ಸಮಿತಿಯ ಎರಡು ಭಾಗಗಳಾಗಿರುವುದನ್ನು ಕೇಳಿ ಬೇಸರಗೊಂಡು, ಯಾವ ಬಣಕ್ಕೂ ಮಣಿಯದೆ, ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿ ಬಂದು ಅಕ್ಟೋಬರ್ 1,1921ರಂದು ಬಳ್ಳಾರಿ ರೈಲು ನಿಲ್ದಾಣದಲ್ಲೇ 8 ತಾಸುಗಳ ಕಾಲ ವಾಸ್ತವ್ಯ



ಮಾಡಿ ಮರುದಿನ ಪ್ರಯಾಣ ಮಾಡಿದ್ದುರು.

ಎರಡನೇ ಬಾರಿಗೆ ಬಳ್ಳಾರಿ ಜಿಲ್ಲೆಗೆ1934 ಮಾರ್ಚ್ 2 ಹಾಗೂ 3ರಂದು ಅಸ್ಪೃಶ್ಯತಾ ನಿವಾರಣೆ ಸಲುವಾಗಿ ಈ ಕಾರ್ಯಕ್ಕೆ ನಿಧಿ ಸಂಗ್ರಹಿಸುವ ಸಲುವಾಗಿ ಬಂದಿದ್ದವರು. ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಸ್ವತಂತ್ರ ಹೋರಾಟಗಾರರು, ಮುಂದಾಳುಗಳು ಗಾಂಧೀಜಿಯವರನ್ನು ಅತ್ಯಂತ ಪ್ರೀತಿ ಗೌರವಗಳಿಂದ ಸ್ವಾಗತಿಸಿ ಅವರಿಗೆ ವಾಸ್ತವದ ವ್ಯವಸ್ಥೆಯನ್ನು ಮಾಡಿ ನಿಧಿ ಸಂಗ್ರಹಿಸಿ ಕೊಟ್ಟು ಗೌರವ ದಿಂದ ಬಿಳ್ಕೊಟ್ಟಿದ್ದು ಚಾರಿತ್ರಿಕ ದಾಖಲೆಯಾಗಿದೆ. ದಾವಣಗೆರೆಯಿಂದ ಬಳ್ಳಾರಿ ಜಿಲ್ಲೆಗೆ ಆಗಮಿಸಿದಾಗ ಅವರನ್ನು ಈಗಿನ ಹಗರಿಬೊಮ್ಮನಹಳ್ಳಿ ತಾಲೂಕು ಬನ್ನಿಕಲ್ಲು ಗ್ರಾಮದ ವೀರಾಪುರ ಸಾಹುಕಾರ ಈಶ್ವರಪ್ಪ ಅವರ ಬಳಿ ಆಗಸ್ಟೇ ಖರೀದಿಸಿದ್ದ ಶವರ್ ಲೆಟ್ ಕಾರಿತ್ತು. ಆ ಕಾರಿನ್ನು ಸ್ವತಃ ಈಶ್ವರಪ್ಪನವರಿಗೆ ಕಾರಿನ ಚಾಲನೆ ಮಾಡಿಕೊಂಡು ಗಾಂಧೀಜಿಯವರನ್ನು ದಾವಣಗೆರೆಯಿಂದ ಬಳ್ಳಾರಿಯವರಿಗೆ ಈ ಕಾರಿನಲ್ಲೇ ಕರೆದುಕೊಂಡು ಬಂದು ಪ್ರವಾಸ ಮಾಡಿದ್ದು ಮತ್ತೊಂದು ವಿಶೇಷವಾದ ಚರಿತ್ರೆಯಾಗಿದೆ.

ದಾವಣಗೆರೆಯಿಂದ ಹರಪನಹಳ್ಳಿಗೆ ಬರುವ ಮಾರ್ಗದಲ್ಲಿ ನೀಲಗುಂದ ಕ್ರಾಸ್ ನಲ್ಲಿ ನಿಂತ ಜನರನ್ನು ಕಂಡು ಅಲ್ಲಿಯ ಜನರಿಂದ ನಿಧಿ ಸಂಗ್ರಹಿಸಿಕೊಂಡು ಹರಪನಹಳ್ಳಿಗೆ ಬಂದಿದ್ದರು. ಹರಪನಹಳ್ಳಿಗೆ ಬಂದಾಗ ಸ್ವಾತಂತ್ರ ಹೋರಾಟಗಾರರು ಸ್ವಾಗತಿಸಿ,ನಿಧಿ ಸಂಗ್ರಹಿಸಲು ಸಹಕಾರ ನೀಡಿದ್ದರು. ಹರಪನಹಳ್ಳಿಯಲ್ಲಿ ಗಾಂಧಿ ಯುವಕರು ನಿಧಿ ಸಂಗ್ರಹಿಸುತ್ತಾ ಜೈನರು ನಡೆಸುತ್ತಿದ್ದ ಖಾದಿ ಅಂಗಡಿಗೆ ಹೋಗಿ ನಾನು ಬನಿಯಾ ಹಣ ಕೊಡಿ ಅಂದರಂತೆ. ಮತ್ತೊಬ್ಬ ಶೆಟ್ಟಿಯನ್ನು ಕಂಡು ಗಾಂಧಿ ನಗುತ್ತಲೆ ನೀವು ದೇಶಕ್ಕೆ ಏನು ಕೊಟ್ಟಿದ್ದೀರಿ ಎಂದು ಕೇಳಿದರಂತೆ, ಆಗ ನಿಮ್ಮನ್ನೇ ನಾವು ದೇಶಕ್ಕೆ ಕೊಟ್ಟಿದ್ದೀವಿ ಎಂದು ಶೆಟ್ಟರು ನಗುತ್ತಲೆ ಹೇಳಿದರಂತೆ. ಈ ನಿಧಿ ಸಂಗ್ರಹ ಸಂದರ್ಭದಲ್ಲಿ ಕೆಲವರು ಬೆಳ್ಳಿ ನಾಣ್ಯಗಳನ್ನು ಬೆಳ್ಳಿ ತಟ್ಟೆಯಲ್ಲಿಟ್ಟು ಕೊಟ್ಟಾಗ ನನಗೆ ಹಣ ಬೇಕು ಎಂದು ಬೆಳ್ಳಿ ನಾಣ್ಯ ತೆಗೆದುಕೊಂಡು ಬೆಳಿತಟ್ಟೆಯನ್ನು ಸಹ ಹರಾಜು ಹಾಕಿದರಂತೆ, ಆಗ ಅದನ್ನು ಕೊಟ್ಟವರೆ ಹರಾಜಿನಲ್ಲಿ ಹಣಕೊಟ್ಟು ಖರೀದಿಸತ್ತಾರೆ. ಹೀಗೆ ಗಾಂಧೀಜಿ ಅವರ ಓಡಾಟ ಹರಪನಹಳ್ಳಿಯಲ್ಲಿ ಸಂಚಲನವನ್ನು ಉಂಟು ಮಾಡಿತ್ತು. ಹಾಗೇನೆ ನಿಧಿ ಸಂಗ್ರಹಿಸುತ್ತ ಇಲ್ಲೇ ವಾಸ್ತವ ಮಾಡಿದ್ದು ಮತ್ತೊಂದು ಚಾರಿತ್ರಿಕ ಘಟನೆಯಾಗಿದೆ.

ಹೌದು ಗಾಂಧೀಜಿಯವರು ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕೊಠಡಿಯೊಂದರಲ್ಲಿ ವಾಸ್ತವ ಮಾಡಿದ್ದರು ಇವರೊಂದಿಗೆ ಗಂಗಾಧರ ರಾವ್ ದೇಶ ಪಾಂಡೆ, ಟಕ್ಕರ್ ಪಾಪು ಅವರು ರಾತ್ರಿ ಗಾಂಧೀಜಿಯವರೊಂದಿಗೆ ತಂಗಿದ್ದರು. ಗಾಂಧೀಜಿಯವರು ತಂಗಿದ್ದು ಈ ಕೊಠಡಿಯನ್ನು ಈಗ ಒಂದು ನೆನಪಿನ ಸ್ಮಾರಕವನ್ನಾಗಿ ಮಾಡಲಾಗಿದೆ. ಹರಪನಹಳ್ಳಿ ಶಾಸಕರಾಗಿದ್ದ ಎಂ.ಪಿ. ರವೀಂದ್ರ ಅವರು ಅತ್ಯಂತ ಆಸಕ್ತಿಯಿಂದ ಕೊಠಡಿಯನ್ನು ಅಭಿವೃದ್ಧಿಪಡಿಸಿ ಅವರ ನೆನಪಿಗಾಗಿ ಶಾಶ್ವತವಾದ ಒಂದು ಸ್ಮಾರಕವನ್ನು ನಿರ್ಮಾಣ ಮಾಡಿದ್ದಾರೆ .ವಿಶ್ರಾಂತಿ ಬಂಗಿಯಲ್ಲಿ ಕುಳಿತಿರುವ ಗಾಂಧೀಜಿಯವರ ಪ್ರತಿಮೆಯು ಮುಂಬೈಯನ್ನು ಬಿಟ್ಟರೆ ಎರಡನೇ ಶಿಲ್ಪ ಇರುವುದು ಹರಪನಹಳ್ಳಿಯಲ್ಲಿಯೇ. ಇದರ ಎತ್ತರ ಐದು ಅಡಿ, 1050 ಟನ್ ತೂಕವಿದೆ.ಈ ಪ್ರತಿಮೆಯನ್ನು ದೇವರುಗಳನ್ನು ನಿರ್ಮಿಸುವ ಕೃಷ್ಣ ಶಿಲೆಯಿಂದ ನಿರ್ಮಿಸಲಾಗಿದೆ ವಿಶೇಷವಾದ ಗಾಂಧಿ ಪ್ರತಿಮೆಯನ್ನು ಈ ಕೊಠಡಿಯಲ್ಲಿ ಸ್ಥಾಪಿಸುವ ಮೂಲಕ ಶಾಸಕರಾಗಿದ್ದ ಎಂ.ಪಿ. ರವೀಂದ್ರ ಅವರು ಗಾಂಧೀಜಿ ಹರಪನಹಳ್ಳಿಗೆ ಬಂದು ವಾಸ್ತವ್ಯ ಮಾಡಿದ್ದ ನೆನಪನ್ನು ಶಾಶ್ವತಗೊಳಿಸಿದ್ದಾರೆ.

ಹರಪನಹಳ್ಳಿಯಲ್ಲಿ ವಾಸ್ತವ ಮಾಡಿ ಮರುದಿನ ಕೊಟ್ಟೂರಿಗೆ ಪ್ರಯಾಣ ಬೆಳೆಸಿದ ಮಾರ್ಗ ಮಧ್ಯದಲ್ಲಿ ಚಿಗಟೇರಿ ಕ್ರಾಸ್ ಬಳಿ ಸ್ವತಂತ್ರ ಹೋರಾಟಗಾರರು ಸೇರಿಕೊಂಡು ಚಿಗಟೇರಿ ಗ್ರಾಮಕ್ಕೆ ಆಗಮಿಸುವಂತೆ ಮನವಿ ಮಾಡಿಕೊಂಡರು ಆದರೆ ಕಾರ್ಯಕ್ರಮದಲ್ಲಿ ಹೆಸರು ಇಲ್ಲಿದ್ದರಿಂದ ಅವರು ಗ್ರಾಮಕ್ಕೆ ಹೋಗದೆ ಅಲ್ಲಿಯೇ ಅವರು ಗೋಳನ್ನು ಮಾತನಾಡಿಸಿ ಕೊಟ್ಟೂರಿಗೆ ಪ್ರಯಾಣ ಬೆಳೆಸಿದ್ದರು. ಕೊಟ್ಟೂರಿನಲ್ಲಿ ಬಳ್ಳಾರಿಯ ಕಾಂಗ್ರೆಸ್ ಮುಖಂಡರಾದ ಟೀಕೂರು ಸುಬ್ರಮಣ್ಯ, ಮೊದಲಾದವರು ಬರಮಾಡಿಕೊಂಡು ಸಮಾವೇಶವನ್ನು ಹಮ್ಮಿಕೊಂಡಿದ್ದರು. ಕೊಟ್ಟೂರು ಸ್ವತಂತ್ರ ಹೋರಾಟಗಾರ ಕೇಂದ್ರವಾಗಿತ್ತು.ಇವರುಗಳು ರಚನಾತ್ಮಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಕೊಟ್ಟೂರಿನ ದೀನ ಸೇವಾಶ್ರಮಕ್ಕೆ ಗಾಂಧೀಜಿಯವರು ಅಡಿಗಲ್ಲು ಹಾಕಿದ್ದರು.

ಕೊಟ್ಟೂರಿನಿಂದ ಕೂಡ್ಲಿಗಿಗೆ ಆಗಮಿಸಿ ಇಲ್ಲಿಯೂ ಸಹ ಬಹಿರಂಗ ಕಾರ್ಯಕ್ರಮದಲ್ಲಿ ಭಾಗವಹಿಸಿ ಭಾಷಣ ಮಾಡಿದ್ದರು. ನಂತರ ಸೊಂಡೂರಿಗೆ ಪ್ರಯಾಣ ಬೆಳೆಸಿ ದ್ದರು. ಸಂಡೂರಿನಲ್ಲಿ ವಾಸ್ತವ ಮಾಡಿದ ಗಾಂಧೀಜಿಯವರು ಸೊಂಡೂರಿನ ರಾಜರಾದ ಘೋರ್ಪಡೆಯವರು ದಲಿತರಿಗೆ ದೇವಸ್ಥಾನಗಳ ಮುಕ್ತ ಪ್ರವೇಶ ನೀಡಿರುವುದನ್ನು ಕೇಳಿ ಸಂತಸಪಟ್ಟಿದ್ದರು. ಸೊಂಡೂರಿನ ರಾಜರು ದಲಿತರಿಗೆ ಮುಕ್ತ ಪ್ರವೇಶ ಮಾಡಿದ್ದರಿಂದ ಆಕಾಶವೇನು ಕಳಚಿ ಬೀಳಲಿಲ್ಲ ಎಂದು ಅವರ ಕಾರ್ಯವನ್ನು ಕೊಂಡಾಡಿದ್ದವರು.

ತಮ್ಮ ಅಸ್ಪೃಶ್ಯತಾ ನಿವಾರಣೆ ಕಾರ್ಯದ ನಿಧಿ ಸಂಗ್ರಹದ ಸಂದರ್ಭದಲ್ಲೇ ಸೊಂಡೂರಿನ ಪ್ರಕೃತಿ ಸೌಂದರ್ಯವನ್ನು ಕಂಡು ಬೆರಗಾಗಿದ್ದರು.ಸೀ ಸಂಡೂರು ಇನ್ ಸೆಪ್ಟೆಂಬರ್ ಎಂದು ಗಾಂಧೀಜಿ ಸಂಡೂರಿನ ಹಸಿರನ್ನು ಕಂಡು ಉದ್ಘೋಷಿಸಿದ್ದವರು.

ಮಾರ್ಚ್ 3,ರಂದು ಸೊಂಡೂರಿನಿಂದ ಕುಡಿತಿನಿಯ ಮೂಲಕ ಬಳ್ಳಾರಿಗೆ ಪ್ರವೇಶ ಮಾಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು, ವೈ ನಾಗೇಶ್ ಶಾಸ್ತ್ರಿಗಳು,ಜೋಳದರಾಶಿ ದೊಡ್ಡನ ಗೌಡರು ಮೊದಲಾದವರು ಗಾಂಧೀಜಿಯವರನ್ನು ಬಳ್ಳಾರಿಗೆ ಸ್ವಾಗತಿಸಿದರು. ಬನ್ನಿಕಲ್ ವೀರಾಪುರದ ಈಶ್ವರಪ್ಪನವರು ಚಾಲನೆ ಮಾಡಿಕೊಂಡು ಬರುತ್ತಿದ್ದ ಕಾರು ಆಗಮಿಸುತ್ತಿದ್ದಂತೆ ಗಾಂಧೀಜಿಯವರನ್ನು ಸ್ವಾಗತಿಸಿ ವೈ.ನಾಗೇಶ ಶಾಸ್ತ್ರಿ ಅವರು ರಚಿಸಿದ ದಯಾವೀರ ಚರಿತೆ ಕಾವ್ಯದ ಕೆಲವು ಭಾಗಗಳನ್ನು ದೊಡ್ಡನಗೌಡರು ವಾಚಿಸಿದ್ದರು. ಬಳ್ಳಾರಿಯಲ್ಲಿನ ಪ್ರವಾಸ ಮುಗಿದ ನಂತರ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಿಂದ ಹೊಸಪೇಟೆ ಕಡೆಗೆ ರೈಲಿನಲ್ಲಿ ಪ್ರವಾಸ ಮುಂದುವರಿಸಿದ್ದರು.

ಬಳ್ಳಾರಿಯಿಂದ ಗದಗಿಗೆ ಹೋಗುವ ಮಾರ್ಗದಲ್ಲಿ ಗಾಂಧೀಜಿಯವರು ಹೊಸಪೇಟೆ ನಿಲ್ದಾಣದಲ್ಲಿ ಕೆಲಕಾಲ ತಂಗಿದ್ದರು. ಈ ಸಂದರ್ಭದಲ್ಲಿ ಬೆಲ್ಲದ ಚೆನ್ನಪ್ಪ,ಅಸುಂಡಿ ಹನುಮಂತರಾವ್ ಮೊದಲಾದ ಕಾರ್ಯಕರ್ತರು ಭಿನ್ನ ಒತ್ತಳೆ ಸಲ್ಲಿಸಿ ಅಸ್ಪೃಶ್ಯತಾ ನಿವಾರಣೆಗೆ ದೇಣಿಗೆ ನೀಡಿದ್ದರು. ಹೀಗೆ ಹರಪನಹಳ್ಳಿಯಿಂದ ಪ್ರಾರಂಭಗೊಂಡು ಕೊಟ್ಟೂರು ಕೂಡ್ಲಿಗಿ ಸೊಂಡೂರ್ ಬಳ್ಳಾರಿ, ಹೊಸಪೇಟೆಗಳಲ್ಲಿ ಕಾರ್ಯಕ್ರಮಗಳ ಮೂಲಕ ಗಾಂಧಿಯವರು ಪ್ರವಾಸ ಮಾಡಿದ್ದರು. ಇದು ಅಖಂಡ ಬಳ್ಳಾರಿ ಜಿಲ್ಲೆ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಘಟನಯಾಗಿದೆ.

ಅಂದಿನ ಬಳ್ಳಾರಿ ಜಿಲ್ಲೆಯ ಪ್ರವಾಸ ಕೈಗೊಂಡ ನೆನಪಿಗಾಗಿ ಅಂದು ಬಳ್ಳಾರಿ ಡಿಸ್ಟ್ರಿಕ್ಟ್ ಬೋರ್ಡ್ ಬಳ್ಳಾರಿಯ ಹೊರವಲಯದ ಬಡಾವಣೆಗೆ ಗಾಂಧಿನಗರ ವೆಂದು ನಾಮಕರಣ ಮಾಡಿತ್ತು. ಹರಪನಹಳ್ಳಿಯಲ್ಲಿ ವಾಸ್ತವ್ಯ ಮಾಡಿದ ನೆನಪಿಗಾಗಿ ಹರಪನಹಳ್ಳಿಯ

ಶಾಸಕರಾಗಿದ್ದ ಎಂಪಿ ರವೀಂದ್ರ ಅವರು ಗಾಂಧೀಜಿ ತಂಗಿದ್ದ ಶಾಲಾ ಕೊಠಡಿಯಲ್ಲಿ ಅವರ ಸ್ಮರಣಾರ್ಥ ಸ್ಮಾರಕವನ್ನು ನಿರ್ಮಿಸಿದ್ದಾರೆ. ದಿನಾಂಕ 26.12.2017 ರಂದು ಅಂದಿನ ಮುಖ್ಯಮಂತ್ರಿಗಳಿಂದ ಸ್ಮಾರಕವನ್ನು ಉದ್ಘಾಟಿಸಿದ್ದರು. ಈ ಸ್ಮಾರಕದ ಮೂಲಕ ಬಳ್ಳಾರಿ ಜಿಲ್ಲೆ ಹಾಗೂ ವಿಜಯನಗರ ಜಿಲ್ಲೆಗಳ ನೆಲಕ್ಕೆ ಗಾಂಧಿ ಸ್ಪರ್ಶ ಹಾಗೂ ಗಾಂಧಿಯವರ ಪ್ರವಾಸದ ನೆನಪು ಶಾಶ್ವತವಾಗಿ ಉಳಿಯುವಂತೆ ಹಾಗೂ ಯುವ ಪೀಳಿಗೆಗೆ ಪರಿಚಯಿಸುವ ಕಾರ್ಯವನ್ನು ಮಾಡುವ ಮೂಲಕ ಗಾಂಧಿ ನೆನಪನ್ನು ಶಾಶ್ವತಗೊಳಿಸಿದ್ದಾರೆ. ಸ್ವತಂತ್ರ ಹೋರಾಟದ ಚರಿತ್ರೆಯಲ್ಲಿ ಬಳ್ಳಾರಿ ಜಿಲ್ಲೆಗೆ ಗಾಂಧಿಯವರ ಪ್ರವಾಸದ ನೆನಪು ಬಹು ಮುಖ್ಯವಾದ ಘಟನೆಯಾಗಿ ಉಳಿದಿದೆ.

# ಸ್ವಚ್ಛ ನಗರಕ್ಕೆ ಎಲ್ಲರೂ ಕೈ ಜೋಡಿಸಿ

## ಮೇಯರ್ ಮುಲ್ಲಂಗಿ ನಂದೀಶ್ ಹೇಳಿಕೆ | ಸ್ವಚ್ಛತೆಯ ಸೇವೆ ಕಾರ್ಯಕ್ರಮ



■ ಹಂಪಿ ಟೈಮ್ಸ್ ಬಳ್ಳಾರಿ

ಜನಸಾಮಾನ್ಯರ ಆರೋಗ್ಯ ಸುಸ್ಥಿರಗೊಳ್ಳಲು ನಗರದಲ್ಲಿನ ವಿವಿಧ ಪ್ರದೇಶಗಳಲ್ಲಿ ಶುಚಿತ್ವ ಕಾಪಾಡುವುದು ಅಗತ್ಯವಾಗಿದೆ. ಸ್ವಚ್ಛ ನಗರ ನಿರ್ಮಿಸಲು ಅಧಿಕಾರಿಗಳು, ಪೌರಕಾರ್ಮಿಕರು, ದಿನಗೂಲಿ ಕಾರ್ಮಿಕರು, ಸಾರ್ವಜನಿಕರು ಸೇರಿದಂತೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದು ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ನೆಹರು ಯುವ ಕೇಂದ್ರ, ರಾಷ್ಟ್ರೀಯ ಅಂಕಿ ಸಂಖ್ಯೆಗಳ ಇಲಾಖೆ, ಸಾಯಿ ಸಂಸ್ಥೆ, ಲಿಯಾ ಯೂತ್ ಅಸೋಸಿಯೇಷನ್‌ವತಿಯಿಂದ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಮುನಿಸಿಪಾಲ್ ಕಾಲೇಜು ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸ್ವಚ್ಛತೆಯ ಸೇವೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯ 39 ವಾರ್ಡ್‌ಗಳಲ್ಲಿ ದಿನನಿತ್ಯವೂ ಕಸ ವಿಲೇವಾರಿ ನಡೆಯುತ್ತಲಿದ್ದು, ಸಾರ್ವಜನಿಕರು ಕಸ ವಿಲೇವಾರಿ ವಾಹನಗಳಿಗೆ ತ್ಯಾಜ್ಯ ನೀಡಬೇಕು ಎಂದು ಕರೆ ನೀಡಿದರು. ರಾಷ್ಟ್ರೀಯ ಅಂಕಿ ಸಂಖ್ಯೆಗಳ ಇಲಾಖೆಯ ಅಧಿಕಾರಿ ಮನೀಶ್ ಮಾತನಾಡಿ, ಪ್ರತಿಯೊಬ್ಬ ನಾಗರಿಕರು ಸ್ವಚ್ಛತೆಯ ಕಡೆಗೆ ಗಮನ ಹರಿಸಬೇಕು. ನಮ್ಮ ಸುತ್ತ ಮುತ್ತಲಿನ ಪ್ರದೇಶಗಳು ಸ್ವಚ್ಛತೆಯಿಂದ ಕೂಡಿದ್ದರೆ ರೋಗಗಳು ಬರುವುದಿಲ್ಲ. ಪರಿಸರ ಮಾಲಿನ್ಯವೂ ಆಗುವುದಿಲ್ಲ, ಎಲ್ಲರ ಚೆನ್ನಾಗಿರುತ್ತದೆ ಎಂದರು.

ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ಟೋಪಿ ಮತ್ತು ಪುಸ್ತಕ–ಪೆನ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿ ದಾದಾಪೀರ್, ಲಿಯಾ ಯೂತ್ ಅಸೋಸಿಯೇಷನ್ ಅಧ್ಯಕ್ಷ ಅಬ್ರಾಹಮ್, ಪಾಲಿಕೆಯ ಸದಸ್ಯರು, ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಜಾಗೃತಿ ಜಾಥಾ:** ಜಾಗೃತಿ ಜಾಥಾವು ನಗರದ ಡಾ.ರಾಜ್‌ಕುಮಾರ್ ರಸ್ತೆಯ ಮುನಿಸಿಪಾಲ್ ಕಾಲೇಜು ಆವರಣದಿಂದ ಆರಂಭಗೊಂಡು ಸಂಗಂ ವೃತ್ತದಿಂದ ಶ್ರೀರಾಂಪುರ ಕಾಲೋನಿಯವರೆಗೆ ನಡೆಯಿತು. ಜಾಥಾದಲ್ಲಿ ಚಿಗುರು ಕಲಾ ತಂಡದ ಹುಲುಗಪ್ಪ, ಸುಂಕಪ್ಪ ಸೇರಿ ತಂಡದವರಿಂದ ಸ್ವಚ್ಛತಾ ಜಾಗೃತಿ ಗೀತೆ ಹಾಡಿದರು.

# ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ (ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಲಾಲಪ್ಪ ಅವರು ತಿಳಿಸಿದ್ದಾರೆ.

ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 2ಬಿ, 3ಎ, 3ಬಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ 2024–25 ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿಯು ಪ್ರವರ್ಗ–1, ಎಸ್.ಸಿ ಮತ್ತು ಎಸ್.ಟಿ ಗೆ ರೂ.2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿಗೆ ರೂ.1 ಲಕ್ಷ ಒಳಗಿರಬೇಕು.

ವಿದ್ಯಾರ್ಥಿಗಳು https://shp.karnataka.gov.in ಅನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd.hostels@karnataka.gov.in ಗೆ ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ/ತಾಲ್ಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅಕ್ಟೋಬರ್ 30 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಡಿ.ದೇವರಾಜು ಅರಸು ಭವನದ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿ ಹಾಗೂ ಸಹಾಯವಾಣಿ ಸಂಖ್ಯೆ 8050770005 ಗೆ ಸಂಪರ್ಕಿಸಿ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**02–10–2024 – ಬುಧವಾರ**

| | |
|---|---|
| ತಿಥಿ | : ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವ/ಫಾಲ್ಗುಣಿ |
| ಯೋಗ | : ಬ್ರಹ್ಮ |
| ಕರಣ | : ಚತುಷ್ಪಾದ |
| ಸೂರ್ಯೋದಯ | : 06:20:03 |
| ಸೂರ್ಯಾಸ್ತ | : 18:11:51 |
| ರಾಹು ಕಾಲ | : 12:16 |
| ಯಮಘಂಡ ಕಾಲ | : 09:18–10:47 |
| ಗುಳಿಕ ಕಾಲ | : 12:16–13:45 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 01–10–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.95 ಅಡಿ |
| ಒಳ ಹರಿವು | 8277 ಕ್ಯುಸೆಕ್ |
| ಹೊರ ಹರಿವು | 10177 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.578 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1617.94 ಅಡಿ |
| ಒಳ ಹರಿವು | 1220 ಕ್ಯುಸೆಕ್ |
| ಹೊರ ಹರಿವು | 9791 ಕ್ಯುಸೆಕ್ |
| ಸಾಮರ್ಥ್ಯ | 55.737 ಟಿಎಂಸಿ |

# ಸಂಸ್ಕೃತಿಯ ತವರೂರು ಭಾರತ ಯಶಸ್ಸಿಗೆ ಹಿರಿಯರ ಅನುಭವ ಅಗತ್ಯ

### ನ್ಯಾ.ಅಬ್ದುಲ್ ರಹೀಮಾನ ಎ.ನಂದಗಡಿ ಅಭಿಮತ । ಹಿರಿಯ ನಾಗರಿಕರ ದಿನಾಚರಣೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಹಿರಿಯ ನಾಗರಿಕರು ಅಪಾರ ಅನುಭವ ಹೊಂದಿದ ಜ್ಞಾನ ಭಂಡಾರವಿದ್ದಂತೆ ಎಂದು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ.ನಂದಗಡಿ ಅವರು ಹೇಳಿದರು.

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಹೊಸಪೇಟೆಯ ನಗರಸಭೆಯಲ್ಲಿ ನಡೆದ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಭಾರತ ದೇಶವು ಸಂಸ್ಕೃತಿಯ ತವರೂರು. ಭಾರತದ ನಾಗರಿಕರು ಹಿರಿಯರಿಗೆ ದೇವರ ಸ್ಥಾನವನ್ನು ನೀಡಿ ಗೌರವಿಸುತ್ತಾರೆ. ಹಿರಿಯ ನಾಗರಿಕರು ತಮ್ಮ ಅನುಭವಗಳನ್ನು ಯುವ ಜನತೆಗೆ ಧಾರೆ ಎರೆದು, ಯುವ ಜನತೆಯ ಯಶಸ್ಸಿಗೆ ಪಾತ್ರರಾಗುತ್ತಿದ್ದಾರೆ. ಈಗಿನ ದಿನಗಳಲ್ಲಿ ಯುವಕರಿಗೆ ಉತ್ಸಾಹ ಕಡಿಮೆಯಾಗುತ್ತಿದೆ. ಹಿರಿಯರು ಪಾಲಿಸುತ್ತಿದ್ದ ಜೀವನ ಶೈಲಿಯನ್ನು ಯುವಕರು ಅಳವಡಿಸಿಕೊಂಡರೆ ಯಶಸ್ಸು ಕಂಡಿತ. ಜೀವನದಲ್ಲಿ ಏನಾದರು ಸಾಧನೆ ಮಾಡ ಬೇಕಾದರೆ ಮನೆಯ ಹಿರಿಯರ ಆಶೀರ್ವಾದ ವಿರಬೇಕು ಎಂದರು.

ಹಿರಿಯ ನಾಗರಿಕರಿಗಾಗಿ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಿದೆ. ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು ಎಂದು ತಿಳಿಸಿದರು.


ನರಸಭೆಯ ಪೌರಾಯುಕ್ತ ಚಂದ್ರಪ್ಪ ಸಿ. ಅಧ್ಯಕ್ಷತೆವಹಿಸಿ ಮಾತನಾಡಿ, ಹಿರಿಯ ನಾಗರಿಕರು ತಮ್ಮ ಜೀವನದಲ್ಲಿ ಎಲ್ಲ ರೀತಿಯ ನೋವು ನಲಿವನ್ನು ಅನುಭವಿಸಿ ತಮ್ಮ ಜೀವನದ ಹಾದಿಯನ್ನು ಸವೆಸಿರುತ್ತಾರೆ. ಅವರು ತಮ್ಮ ಜೀವದಲ್ಲಿ ಮಾಡಿದ ಸಾಧನೆ ಬಗ್ಗೆ ಯುವ ಜನತೆಗೆ, ಮಕ್ಕಳಿಗೆ ಮನವರಿಕೆ ಮಾಡಿ ಕೊಡಬೇಕು. ಎಂದು ಹೇಳಿದರು.

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ್ ಅವರು ಮಾತನಾಡಿ, ಭಾರತ ಸರ್ಕಾರವು 2007ರಲ್ಲಿ ತಂದೆ ತಾಯಿಯರ ಹಾಗೂ ಹಿರಿಯರ ಪಾಲನೆ, ಪೋಷಣೆ ಮತ್ತು ಕಲ್ಯಾಣ ಅಧಿನಿಯಮ 2007ರ ಕಾಯ್ದೆಯನ್ನು ಜಾರಿ ಮಾಡಿತು. ಮಕ್ಕಳು ತಂದೆ ತಾಯಿಯರ ಹಾಗೂ ಹಿರಿಯರ ಪಾಲನೆ, ಪೋಷಣೆ ಮತ್ತು ಕಲ್ಯಾಣ ಅಂದರೆ ಅವರಿಗೆ ಮೂಲಭೂತ ಸೌಲಭ್ಯ ಒದಗಿಸುವಲ್ಲಿ ವಿಫಲವಾದರೆ ಈ ಅಧಿನಿಯದಡಿ ದೂರು ದಾಖಲಿಸಬಹುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಹೊಸಪೇಟೆ ತಾಲೂಕಿನ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಹೇಮಲತಾ ಬಿ ಹುಲ್ಲೂರ, ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್., ಅಪರ ಸಿವಿಲ್ ನ್ಯಾಯಾಧೀಶರಾದ ಅಶೋಕ ಆರ್.ಹೆಚ್., ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರಾದ ಸಂಜೀವ್ ಕುಮಾರ ಜಿ., ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರಾದ ಚೈತ್ರ ಜೆ., ವಕೀಲರ ಸಂಘದ ಅಧ್ಯಕ್ಷರಾದ ಕೆ.ಪ್ರಹ್ಲಾದ್, ವಕೀಲರಸಂಘದಪ್ರಧಾನಕಾರ್ಯದರ್ಶಿಗಳಾದ ಪಿ.ಶ್ರೀನಿವಾಸ ಮೂರ್ತಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕರಿಯಾದ ಡಾ.ದೊಡ್ಡಮನಿ ಎಂ.ಪಿ, ತಾಲೂಕು ಆರೋಗ್ಯಾಧಿಕಾರಿ ಡಾ.ಬಾಸ್ಕರ್, ವಕೀಲರು ಹಾಗೂ ನಗರಸಭೆಯ ಮಾಜಿ ಉಪಾಧ್ಯಕ್ಷರಾದ ಎಲ್.ಎಸ್.ಆನಂದ, ನಿವೃತ್ತ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಎಂ. ರಾಮಪ್ಪ, ನಿವೃತ್ತ ನೌಕರರ ಸಂಘದ ತಾಲೂಕಾಧ್ಯಕ್ಷರಾದ ರಾಜಶೇಖರ ಪಾಟೀಲ್, ಪಟ್ಟಣ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಲಕನ್ ಆರ್.ಮಸುಗುಪ್ಪಿ ಉಪಸ್ಥಿತರಿದ್ದರು.

# ಮಹಾತ್ಮ ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಅಚ್ಚುಕಟ್ಟಾಗಿ ನಡೆಯಲಿ

### ಅಪರ ಜಿಲ್ಲಾಧಿಕಾರಿ ಇ ಬಾಲಕೃಷ್ಣಪ್ಪ ಸೂಚನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಅ.2ರಂದು ಜಿಲ್ಲೆಯಲ್ಲಿ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಜಯಂತ್ಯುತ್ಸವ ಕಾರ್ಯಕ್ರಮವು ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಇ ಬಾಲಕೃಷ್ಣಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಕಚೇರಿಯಲ್ಲಿ ಮಂಗಳವಾರ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಜಯಂತಿ ಪೂರ್ವಭಾವಿ ಸಿದ್ಧತೆ ಪರಿಶೀಲಿಸಿ ಮಾತನಾಡಿದರು. ಅಂದು ಬೆಳಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಮಹಾತ್ಮ ಗಾಂಧೀಜಿಯವರ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಭಾವಚಿತ್ರಕ್ಕೆ ಪೂಜೆ, ಪ್ರತಿಜ್ಞಾ ವಿಧಿ ಸ್ವೀಕಾರ ಸೇರಿದಂತೆ ನಾನಾ ಕಾರ್ಯಕ್ರಮಗಳು ನಡೆಯಲಿವೆ. ಬೆಳಗ್ಗೆ ಆಯಾ ಇಲಾಖೆಗಳಲ್ಲಿ ಮಹಾತ್ಮ ಗಾಂಧೀಜಿಯವರ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಬಳಿಕ ಜಿಲ್ಲಾಡಳಿತ ಭವನಕ್ಕೆ ಆಗಮಿಸಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕು ಎಂದು ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸೂಚನೆ ನೀಡಿದರು.

ಸಾರ್ವಜನಿಕರಿಗೆ ಉತ್ತಮ ಸಂದೇಶ ಹೋಗುವ ನಿಟ್ಟಿನಲ್ಲಿ ಜಿಲ್ಲಾಡಳಿತ ಭವನ ಆವರಣದಲ್ಲಿ ನಡೆಯುವ ಸ್ವಚ್ಛತಾ ನಡಿಗೆ ಕಾರ್ಯಕ್ರಮದಲ್ಲಿ ಜಿಲ್ಲಾಮಟ್ಟದ ಎಲ್ಲ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ತಪ್ಪದೇ ಭಾಗಿಯಾಗಬೇಕು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ಸಂಘ–ಸಂಸ್ಥೆಗಳ ಸದಸ್ಯರು, ವಿದ್ಯಾರ್ಥಿ ಯುವಜನರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಕಾರ್ಯಕ್ರಮಕ್ಕೆ ಸಹಕಾರ ನೀಡಬೇಕು ಎಂದರು.

**ವಿಶೇಷ ಕಾರ್ಯಕ್ರಮ ಅಕ್ಟೋಬರ್ 10ಕ್ಕೆ:** ವಿಜಯನಗರ ಜಿಲ್ಲೆಯಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ನಡೆಸಲಾಗಿತ್ತು. ಅ.10ರಂದು ಗಾಂಧೀಜಿ ಜಯಂತ್ಯುತ್ಸವದ ವಿಶೇಷ ಕಾರ್ಯಕ್ರಮದಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ, ಉಪನ್ಯಾಸ ಕಾರ್ಯಕ್ರಮಗಳು ನಡೆಯಲಿವೆ ಎಂದು ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಸಭೆಗೆ ತಿಳಿಸಿದರು.

ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ಧಲಿಂಗೇಶ ರಂಗಣ್ಣನವರ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಾಶುಮೋದ್ದೀನ್, ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಮಾನಸಿಕ ಒತ್ತಡ ನಿಗ್ರಹಿಸಿಕೊಂಡು ಮರೆವು ಖಾಯಿಲೆ ದೂರಗೊಳಿಸಿ

### ನ್ಯಾ.ರಾಜೇಶ್.ಎನ್ ಹೊಸಮನೆಚ ಹೇಳಿಕೆ । ಜಾಗತಿಕ ಆಲ್ಜೈಮರ್ ದಿನ



■ **ಹಂಪಿ ಟೈಮ್ಸ್ ಬಳ್ಳಾರಿ**

ದೈನಂದಿನ ಕಾರ್ಯದ ನಿಮಿತ್ತ ಮಾನಸಿಕ ಒತ್ತಡದಿಂದ ಮರೆವು ಖಾಯಿಲೆ ಉದ್ಭವಿಸುವ ಸಂಭವವಿದ್ದು, ಮಾನಸಿಕ ಒತ್ತಡಗಳನ್ನು ನಿಗ್ರಹಿಸಿಕೊಂಡು ವೃದ್ಧಾಪ್ಯ ವಯೋಮಾನ ದಲ್ಲಿ ಆರೋಗ್ಯ ಜೀವನ ರೂಪಿಸಿಕೊಳ್ಳಿ ಎಂದು ಹಿರಿಯ ಸಿವಿಲ್ ನ್ಯಾಯಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ರಾಜೇಶ್. ಎನ್ ಹೊಸಮನೆ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮ, ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರ, ಜಿಲ್ಲಾ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಆಸ್ಪತ್ರೆಯ ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರದ ಆವರಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಜಾಗತಿಕ ಆಲ್ಜೈಮರ್ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ದಿನಮಾನಗಳಲ್ಲಿ ಕೆಲಸದ ಒತ್ತಡದಿಂದ ಚಿಕ್ಕ ವಯಸ್ಸಿನ ಮಕ್ಕಳಿಂದ ಹಿಡಿದು ಯುವಕರು ಮತ್ತು ಹಿರಿಯರಲ್ಲಿ ಮರೆವು ಖಾಯಿಲೆ ಕಂಡು ಬರುತ್ತಿದ್ದು, ಯೋಗ, ಧ್ಯಾನ, ವ್ಯಾಯಾಮ, ಪ್ರಾಣಾಯಾಮಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ದೈನಂದಿನ ಚಟುವಟಿಕೆ ಆರಂಭಿಸಿ ಮೆದುಳಿಗೆ ಸಂಬಂಧಿಸಿದ ಖಾಯಿಲೆಗಳಿಂದ ಮುಕ್ತರಾಗಬೇಕು ಎಂದರು.

ಸಮಾಜದಲ್ಲಿನ ಹಿರಿಯರನ್ನು ಗೌರವಿಸುವುದು ಭಾರತ ದೇಶದ ಸಂಸ್ಕಾರವಾಗಿದ್ದು, ಮುಪ್ಪಿನ ಕಾಲದಲ್ಲಿ ಹಿರಿಯರಿಗೆ ಹಲವು ಖಾಯಿಲೆ ಬರುವುದು ಸಹಜವಾಗಿದೆ. ಅಂತಹ ಸಮಯದಲ್ಲಿ ಹಿರಿಯರ ಆರೈಕೆ ಮಾಡುತ್ತಾ ಮಮತೆಯಿಂದ ಸ್ಪಂದಿಸಿ, ಸಂತಸದಿಂದ ಬೆರೆತು ಜೀವನ ಮುನ್ನಡೆಸಿ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ ರಮೇಶ್ ಬಾಬು ಮಾತನಾಡಿ, ವಯೋಮಾನ ಸಮಯದಲ್ಲಿ ಅರಳು–ಮರಳು ಎನ್ನುವ ಗಾದೆ ಮಾತಿನಂತೆ ಹಿರಿಯರಿಗೆ ಅರವತ್ತು ವಯಸ್ಸು ಆದಂತೆ ಮರೆವು ಖಾಯಿಲೆ ಹೆಚ್ಚಾಗುತ್ತದೆ. ವೃದ್ಧಾಪ್ಯ ವಯಸ್ಸಿನಲ್ಲಿಯೂ ಸಹ ಕ್ರಿಯಾಶೀಲರಾಗಿ ಜೀವನ ನಡೆಸಬೇಕು ಎಂದು ಹಿರಿಯರಿಗೆ ಹುರಿದುಂಬಿಸಿದರು.

ಯುವಕರು ಹಾಗೂ ಜನಸಾಮಾನ್ಯರು ಹಿರಿಯ ನಾಗರಿಕರಿಗೆ ಸಹಾಯ ಮಾಡುವ ಮನೋಭಾವನೆ ಬೆಳೆಸಿಕೊಳ್ಳಬೇಕು. ಸುಸ್ಥಿರ ಆರೋಗ್ಯ ಜೀವನ ಸಾಗಿಸಲು ಯೋಗ, ಧ್ಯಾನ, ಕಪಿಲಭಾತಿ ಪ್ರಾಣಾಯಮ ರೂಢಿಸಿಕೊಳ್ಳಬೇಕು ಎಂದರು.

ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಬಸರೆಡ್ಡಿ.ಎನ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಮೆದುಳಿನ ಶಕ್ತಿ ಕಡಿಮೆಯಾದಂತೆ, ದೈನಂದಿನ ಕೆಲಸಗಳ ಒತ್ತಡದಿಂದ ಮರೆವು ಖಾಯಿಲೆ ಹೆಚ್ಚಾಗುತ್ತದೆ. ಒತ್ತಡಗಳ ಆಲೋಚನೆಗಳನ್ನು ನಿಯಂತ್ರಿಸಿಕೊಂಡು ಜೀವನ ನಡೆಸುವುದೇ ಮರೆವು ಖಾಯಿಲೆಗೆ ಒಳ್ಳೆ ಔಷಧಿಯಾಗಿದೆ ಎಂದು ಹೇಳಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಅನುಷ್ಠಾನ ಅಧಿಕಾರಿ ಹಾಗೂ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ವೀರೇಂದ್ರ ಕುಮಾರ್.ಕೆ.ಜಿ ಪ್ರಾಸ್ತಾವಿಕವಾಗಿ ಮಾತನಾಡಿ, ಮರೆವು ಖಾಯಿಲೆ ವಯೋವೃದ್ಧರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ವ್ಯವಸ್ಥಿತವಾಗಿ ದಿನಚರಿ ರೂಪಿಸಿಕೊಂಡು, ಮಾನಸಿಕ ಒತ್ತಡಗಳಿಗೆ ಒಳಗಾಗದೆ ಆರೋಗ್ಯವಂತರಾಗಬೇಕು ಎಂದರು.

ಜಿಲ್ಲಾ ಆಸ್ಪತ್ರೆಯಲ್ಲಿ ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರ ತೆರೆಯಲಾಗಿದ್ದು, ಮೆದುಳು ಸಂಬಂಧಿಸಿದ ರೋಗಿಗಳಿದ್ದಲ್ಲಿ ತಜ್ಞ ವೈದ್ಯರೊಂದಿಗೆ ಸಮಾಲೋಚನೆಗೆ ಒಳಪಟ್ಟು ಔಷಧೋಪಚಾರ ಪಡೆಯಬಹುದು ಎಂದು ತಿಳಿಸಿದರು.

**ಪ್ರಶಸ್ತಿ ವಿತರಣೆ:** ಜಾಗತಿಕ ಆಲ್ಜೈಮರ್ ದಿನದ ಅಂಗವಾಗಿ ಆಯೋಜಿಸಿದ್ದ ಮೆದುಳು ಚುರುಕುಗೊಳಿಸುವ ಸ್ಪರ್ಧೆಗಳಲ್ಲಿ ವಿಜೇತ ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿಗೆ ಬಹುಮಾನ ವಿತರಿಸಲಾಯಿತು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ ವಿ.ಕೆ., ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿಗಳಾದ ಡಾ.ವಿಶ್ವನಾಥ.ಕೆ., ಡಾ.ಯೋಗಾನಂದ ರೆಡ್ಡಿ, ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರದ ತಜ್ಞ ವೈದ್ಯ ಹಾಗೂ ನೋಡಲ್ ಅಧಿಕಾರಿ ಡಾ.ರಾಕೇಶ್, ಜಿಲ್ಲಾ ಆಸ್ಪತ್ರೆಯ ಶುಶ್ರೂಷಾಧೀಕ್ಷಕಿ ವಿಮಲಾಕ್ಷಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ.ಹೆಚ್ ದಾಸಪ್ಪನವರ, ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮದ ಜಿಲ್ಲಾ ಕಾರ್ಯಕ್ರಮ ಸಂಯೋಜಕ ಸಣ್ಣಕೇಶವ ಸೇರಿದಂತೆ ಜಿಲ್ಲಾ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಹಾಗೂ ಹಿರಿಯ ನಾಗರಿಕರು ಮತ್ತು ಇತರರು ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

www.hampitimes.com - Hampi Times Margadarshi

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

**ರಜೆಯ ಮೋಜಿಗಾಗಿ ಗಣಿತ ಕಲಿಕೆ**

1) $\sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂದು ಎಂದು ಸಾಧಿಸಿ.

2) $\sqrt{3}+2$ ಒಂದು ಭಾಗಲಬ್ಧ ಸಂಖ್ಯೆ ಎಂದು ಎಂದು ಸಾಧಿಸಿ.

3) 72 ಮತ್ತು 360 ರ ಲ.ಸಾ.ಅ ಮತ್ತು ಮ.ಸಾ.ಅ ವನ್ನು ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ.

4) ಮೂಲಗಳ ಮೊತ್ತ ಮತ್ತು ಗುಣಲಬ್ಧ ಕ್ರಮವಾಗಿ 4 ಮತ್ತು -3 ಹೊಂದಿರುವ ವರ್ಗ ಬಹುಪದೋಕ್ತಿಯನ್ನು ರಚಿಸಿರಿ.

5) $2x^2-5x+3=0$ ವರ್ಗ ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.

6) ವರ್ಗ ಸಮೀಕರಣ $2x^2+kx+3=0$ ದ ಮೂಲಗಳು ಸಮನಾಗಿದ್ದರೆ ದ ಬೆಲೆಯನ್ನು ಕಂಡುಹಿಡಿಯಿರಿ.

7) 3,7,11,15…. ಸಮಾಂತರ ಶ್ರೇಢಿಯ 16ನೇ ಪದವನ್ನು ಸೂತ್ರದ ಸಹಾಯದಿಂದ ಕಂಡುಹಿಡಿಯಿರಿ.

8) 4+7+10+13…… ಸಮಾಂತರ ಶ್ರೇಢಿಯ 24 ಪದಗಳವರೆಗಿನ ಮೊತ್ತವನ್ನು ಕಂಡುಹಿಡಿಯಿರಿ.

9) ಸಮಾಂತರ ಶ್ರೇಢೀಯ nನೇ ಪದ $a_n=5n+3$ ಆದರೆ ಆ ಸಂಖ್ಯಾ ಸರಣಿಯ ಮೊದಲ 3 ಪದಗಳನ್ನು ಕಂಡುಹಿಡಿಯಿರಿ.

10) A(3,5) ಮತ್ತು B(7,-2) ಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.

11) ಮೂಲಬಿಂದು ಮತ್ತು (8,-7) ಬಿಂದುಗಳ ನಡುವಿನ ದೂರವನ್ನುಕಂಡುಹಿಡಿಯಿರಿ.

12) (4,8) ಮತ್ತು (10,2) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 1 : 2 ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

13) (3,5) ಮತ್ತು (7,11) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

14) (a) $x+y=8$ ಮತ್ತು $2x-y=4$
(b) $2x+3y=7$ ಮತ್ತು $2x+y=5$
ಸಮೀಕರಣಗಳನ್ನು ವರ್ಜಿಸುವ ವಿಧಾನದಿಂದ ಬಿಡಿಸಿ.

15) (a) $x+y=5$ ಮತ್ತು $2x+y=6$
(b) $x-y=4$ ಮತ್ತು $2x+y=4$
ಸಮೀಕರಣಗಳನ್ನು ನಕ್ಷಾ ವಿಧಾನದಿಂದ ಬಿಡಿಸಿ.

16) "ತ್ರಿಭುಜದ ಎರಡು ಬಾಹುಗಳನ್ನು ಎರಡು ವಿಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ಸರಳರೇಖೆಯು ಉಳಿದೆರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ" ಎಂದು ಸಾಧಿಸಿ.

17) "ಎರಡು ತ್ರಿಭುಜಗಳಲ್ಲಿ ಅನುರೂಪ ಕೋನಗಳು ಸಮವಾದರೆ ಅವುಗಳ ಅನುರೂಪ ಬಾಹುಗಳ ಅನುಪಾತಗಳು ಸಮ (ಅಥವಾ ಸಮಾನುಪಾತದಲ್ಲಿರುತ್ತದೆ) ಅದ್ದರಿಂದ ಆ ತ್ರಿಭುಜಗಳು ಸಮರೂಪವಾಗಿರುತ್ತವೆ"ಎಂದು ಸಾಧಿಸಿ.

ಪ್ರಶ್ನೆಗಳಿಗೆ ಸರಿ ಉತ್ತರ ಬರೆಯಲು ಪ್ರಯತ್ನಿಸಿ, ಉತ್ತರವು ಪ್ರಕಟಿಸಬೇಕೆನಿಸಿದಲ್ಲಿ 96201 77017 / 94486 33038 ವಾಟ್ಸ್‌ಪ್ ಮಾಡಿ

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಸರ್ಕಾರಿಪ್ರೌಢಶಾಲೆ, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055